ಕಲ್ಯಾಣ ಕರ್ನಾಟಕದ ಪ್ರತಿಬಿಂಬ......

ವಿಜಯನಗರ ಜಿಲ್ಲಾ ಆವೃತ್ತಿ

# ವಾರ್ತಾ ಲೋಕ

ಕನ್ನಡ ದಿನಪತ್ರಿಕೆ

"VARTHA LOKA" Kannada Daily Morning News Paper, VIJAYNAGAR. Dist.: Vijaynagar

ಕೊಪ್ಪಳ । ರಾಯಚೂರು । ಬಳ್ಳಾರಿ । ವಿಜಯನಗರ । ಯಾದಗಿರಿ । ಬೆಂಗಳೂರು । ಬೀದರ ಹಾಗೂ ಕಲಬುರ್ಗಿ ಜಿಲ್ಲೆಯಲ್ಲಿ ಏಕಕಾಲಕ್ಕೆ ಪ್ರಕಾಶಿತ

ಸಂಪಾದಕರು: ಎಸ್. ವಿ. ಕುಲಕರ್ಣಿ ಜಿ. ಸ್ಥಾನಿಕ ಸಂಪಾದಕರು: ಮೊಹಮ್ಮದ ಜಿಲಾನ ಜಿ.

ವಾರ್ತಾ ಲೋಕ
ಕನ್ನಡ ದಿನ ಪತ್ರಿಕೆ ಕಛೇರಿ
ರಾಜಾಸಾಬ ಕಂಪೌಂಡ್,
ಕುಲಾಯಪ್ಪ ಬಿಲ್ಡಿಂಗ್
ಎದುರುಗಡೆ, 1ನೇ ಕ್ರಾಸ್
ಪಟೇಲ್ ನಗರ,
ಹೊಸಪೇಟೆ
ಮೊ.ನಂ : 9482156289

E-mail ID : varthalokahpt@gmail.com

VOLUME : 01 | ISSUE : 132 | Saturday 05-10-2024 | RNI No.: KARKAN/2010/47633 | Page : 4+II | Mob. No. : 9482156289 | Price : ₹3/-

## ಸಂಕ್ಷಿಪ್ತ ವಾರ್ತೆ

### ಮಳೆಯಾಶ್ರಿತ ತೊಗರಿಬೆಳೆಗೆ ಕುರುಗೋಡು ಕೃಷಿಅಧಿಕಾರಿ ದೇವರಾಜ್ ಬೇಟಿ ಪರಿಶೀಲನೆ



● ವಾರ್ತಾಲೋಕ ವಾರ್ತೆ

**ಕುರುಗೋಡು.ಅ.4** ಕುರುಗೋಡು ಪಟ್ಟಣದ ಮಳೆಯಾಶ್ರಿತ ಪ್ರದೇಶವಾದ ಶ್ರೀಮತಿಜಾನಮ್ಮ ಎಂಬ ತೊಗರಿಬೆಳೆ ಬೆಳೆದ ರೈತರ ಜಮೀನಿಗೆ ಕುರುಗೋಡು ಕೃಷಿ ಅಧಿಕಾರಿ ಎಂ.ದೇವರಾಜ್ ಅವರು ಬೇಟಿ ನೀಡಿ ಪರಿಶೀಲನೆ ನಡೆಸಿದರು.

ನಂತರ ಕುರುಗೋಡು ಕೃಷಿ ಅಧಿಕಾರಿ ಎಂ.ದೇವರಾಜ್ ಅವರು ಮಾತನಾಡಿ, ಕುಷ್ಕಿ ಮಳೆಯಾಶ್ರಿತ ಜಮೀನುಗಳಲ್ಲಿ ತೊಗರಿಬೆಳೆಯು ಉತ್ತಮರೀತಿಯಲ್ಲಿ ಬೆಳೆಯುತ್ತಿದ್ದು, ಪ್ರಸ್ತುತವಾಗಿ ತೊಗರಿಬೆಳೆಯು ಹೂ ಮತ್ತು ಕಾಯಿ ಕಟ್ಟುವ ಹಂತದಲ್ಲಿದೆ. ಆದ್ದರಿಂದ ತೊಗರಿಬೆಳೆ ಬೆಳವಣಿಗೆಗೆ 1 ಎಂಎಲ್ ಪ್ರೋಫೆನೋಪಾಸ್ ಎಂಬ ಕೀಟನಾಶಕಔಷದಿಯನ್ನು 1 ಲೀಟರ್‌ನೀರಿನಲ್ಲಿ ಬೆರಸಿಕೊಂಡು ಮತ್ತು ಅದರ ಜೊತೆಗೆ 1ಎಂಎಲ್ ಬೋರಾನ್‌ಪುಡಿಯನ್ನು 1ಲೀಟರ್‌ನೀರಿನಲ್ಲಿ ಬೆರೆಸಿ ಸಿಂಪಡಿಸುವುದರಿಂದ ಹೂ ಉದುರುವುದು ನಿಲ್ಲುತ್ತಿದೆ. ಇದರಿಂದ ಹೆಚ್ಚಿನ ಇಳುವರಿ ಬರುವ ಸಾಧ್ಯತೆ ಇದೆ ಎಂದು ರೈತರಿಗೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ತೊಗರಿಬೆಳೆ ರೈತ ಶ್ರೀಮತಿ ಜಾನಮ್ಮ, ಕೃಷಿಇಲಾಖೆಯ ಆತ್ಮಸಿಬ್ಬಂದಿಯವರಾದ ಜೆ.ರೇಣುಕಾರಾಧ್ಯ, ರೈತಸಂಪರ್ಕಕೇಂದ್ರದ ಅನುಗಾರ ಎಕೆ.ಮಲ್ಲಪ್ಪ ಸೇರಿದಂತೆ ಇತರರು ಇದ್ದರು.

### ಬೆಂಗಳೂರಿನ ಕೆಲ ಕಾಲೇಜುಗಳಿಗೆ ಬಾಂಬ್ ಬೆದರಿಕೆ




● ವಾರ್ತಾಲೋಕ ವಾರ್ತೆ

**ಬೆಂಗಳೂರು :** ಶಾಲೆಗಳ ಬಳಿಕ ನಗರದ ಕೆಲವು ಕಾಲೇಜುಗಳಿಗೆ ಬಾಂಬ್ ಬೆದರಿಕೆ ಇ-ಮೇಲ್ ಬಂದಿದ್ದು,ಆತಂಕ ಸೃಷ್ಟಿಯಾಗಿತ್ತು. ಹನುಮಂತನಗರದಬಿಎಂಎಸ್??ಕಾಲೇಜು,ವಿ.ವಿ.ಪುರಂನಲ್ಲಿರುವ ಬಿಐಟಿ? ಕಾಲೇಜು ಸೇರಿದಂತೆ ಕೆಲವು ಕಾಲೇಜುಗಳಿಗೆ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಪತ್ರ ಬಂದಿದೆ.

ಈ ಸಂಬಂಧ ಮಾಹಿತಿಯನ್ನು ನೀಡಿದ ಕೂಡಲೇ ಸ್ಥಳಕ್ಕೆ ಪೊಲೀಸರು, ಬಾಂಬ್ ನಿಷ್ಕ್ರಿಯ ಸಿಬ್ಬಂದಿ ಧಾವಿಸಿದ್ದು, ಪರಿಶೀಲನೆ ನಡೆಸಿದಾಗ ಇದು ಹುಸಿ ಇ-ಮೇಲ್ ಬೆದರಿಕೆ ಎನ್ನುವುದು ಪತ್ತೆಯಾಗಿದೆ.

ಇನ್ನು ಇದೇ ಸೆ.28 ರಂದು ಬೆಂಗಳೂರಿನ ಪ್ರತಿಷ್ಠಿತ ತಾಜ್ ವೆಸ್ಟ್ ಎಂಡ್ ?ಹೋಟೆಲ್? ಹಾಗೂ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಹೋಟೆಲ್ ಒಟೆರಾ ಗೆ ಇ-ಮೇಲ್ ಮೂಲಕ ದುಷ್ಕರ್ಮಿಗಳು ಬಾಂಬ್ ಬೆದರಿಕೆ ಹಾಕಿದ್ದರು. ಇದಾದ ಆರು ದಿನಗಳ ಬಳಿಕ ಬೆಂಗಳೂರಿನ ಕೆಲವು ಕಾಲೇಜುಗಳಿಗೆ ಇ-ಮೇಲ್ ಮುಖಾಂತರ ಬಾಂಬ್? ಬೆದರಿಕೆ ಬಂದಿದೆ.

### ಶ್ರೀ ವಿಜಯ ದುರ್ಗಾದೇವಿ ಪುರಾಣ ಕಾರ್ಯಕ್ರಮ ಪ್ರಾರಂಭೋತ್ಸವಕ್ಕೆ ಚಾಲನೆ



● ವಾರ್ತಾಲೋಕ ವಾರ್ತೆ

**ಯಲಬುರ್ಗಾ: ಅ4.** ಶ್ರೀ ವಿಜಯ ದುರ್ಗಾದೇವಿ ಸುಕ್ಷೇತ್ರ ಯಲಬುರ್ಗಾ ನಗರದಲ್ಲಿ ಪ್ರತಿವರ್ಷದ ಪದ್ಧತಿಯಂತೆ ಈ ವರ್ಷ ಪುರಣ ಪ್ರಾರಂಭೋತ್ಸವ ಕಾರ್ಯಕ್ರಮ ಅ.3 ರಂದು ಗುರುವಾರ ಸಂಜೆ 7.30 ಕ್ಕೆ ಜರುಗಿತು. ಶ್ರೀ ವಿಜಯ ದುರ್ಗಾದೇವಿ ದೇವಸ್ಥಾನದ ಸೇವಾ ಸಮಿತಿಯ ಪದಾದಿಕಾರಿಗಳು,ಸರ್ವ ಸದಸ್ಯರು, ಮುಖಂಡರು, ಯುವಕರು ,ಸರ್ವ ಧರ್ಮದ ಭಕ್ತರು ಭಾಗವಹಿಸಿ ಪುರಾಣ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪುರಾಣ ಪ್ರವಚನಾಕಾರ ಸಂಕನೂರಿನ ಚಂದ್ರಶೇಖರಯ್ಯ ಶಾಸ್ತ್ರೀ ಹಿರೇಮಠ, ತಬಲಾ ವಾದಕ ಶರಣಕುಮಾರ ಬಂಡಿ ಸಮಸ್ತ ಗುರು ಹಿರಿಯರು ಯುವಕ ಮಿತ್ರರು ಗಣ್ಯಾತಿಗಣ್ಯರು ಮಹಿಳೆಯರು ಹಾಗೂ ಮುಖಂಡರು ಸೇರಿದಂತೆ ಇತರರು ಇದ್ದರು.

**ವರದಿ ಮಂಗಳೇಶ ಎಸ್ ಮೆತಗಲ್**

## ಜೋಗಿ ಕಾಮನ್ ಮ್ಯಾನ್ ಚಿತ್ರದ ಮುಹೂರ್ತಕ್ಕೆ ಬಿ.ಶ್ರೀರಾಮುಲು ಚಾಲನೆ



● ವಾರ್ತಾಲೋಕ ವಾರ್ತೆ

**ಹೊಸಪೇಟೆ:** ನಗರದ ಪುನೀತ್ ರಾಜ್ ಕುಮಾರ ವೃತ್ತದಲ್ಲಿ ಜೋಗಿ ಕಾಮನ್ ಮ್ಯಾನ್ ಚಿತ್ರದ ಮುಹೂರ್ತಕ್ಕೆ ಕ್ಲಾಪ್ ಮಾಡುವ ಮೂಲಕ ಗುರುವಾರ ಚಾಲನೆ ನೀಡಿದರು.ಮಾಜಿ ಸಚಿವ ಬಿ.ಶ್ರೀರಾಮುಲು ಹ್ಯಾಟ್ರಿಕ್ ಹೀರೊ ಶಿವ ರಾಜಕುಮಾರ ಜೋಗಿ ಚಿತ್ರದ ಮೂಲಕ ಪ್ರಖ್ಯಾತಿ ಹೊಂದಿದ್ದಾರೆ. ರಾಷ್ಟ್ರಾದ್ಯಂತ ಪರಿಚಯ ಆಗಿದ್ದಾರೆ. ಜೋಗಿ ಕಾಮನ್ ಮ್ಯಾನ್ ಚಿತ್ರ ಕೂಡ ಅಷ್ಟೇ ಜನಪ್ರಿಯತೆಗಳಿಸಲಿ ಎಂದು ಶುಭ ಹಾರೈಸಿದರು.

ವಿಜಯನಗರ ಜಿಲ್ಲೆಯ ಹುಡುಗರೇ ಸೇರಿ ಈ ಚಿತ್ರ ನಿರ್ಮಿಸುತ್ತಿದ್ದಾರೆ. ಚಿತ್ರರಂಗದಲ್ಲಿ ಹೈದರಾಬಾದ್ ಕರ್ನಾಟಕ ಭಾಗದ ಹುಡುಗರು ಕೂಡ ಬೆಳೆಯಬೇಕು. ಗ್ರಾಮೀಣ ಪ್ರದೇಶದ ಯುವಕರಲ್ಲೂ ಪ್ರತಿಭೆ ಇದೆ. ಸ್ಯಾಂಡಲ್ ವುಡ್ ನಲ್ಲಿ ಇವರ ಪ್ರತಿಭೆ ಅನಾವರಣಕ್ಕೆ ಇದೊಂದು ಸುವರ್ಣ ಅವಕಾಶ ಆಗಿದೆ ಎಂದು ತಿಳಿಸಿದರು.

ಹೊಸಪೇಟೆ ಹುಡುಗ ಜೋಗಿ ತಾಯಪ್ಪ ನಿರ್ದೇಶನ ಮಾಡುತ್ತಿದ್ದಾರೆ.ಕಷ್ಟಪಟ್ಟು ಸಿನಿಮಾ ಮಾಡುತ್ತಿದ್ದಾರೆ. ಅವರ ಯಶಸ್ವಿಗೆ ಎಲ್ಲರೂ ಸಹಕಾರ ನೀಡಬೇಕು.ಈ ಚಿತ್ರದಲ್ಲಿ ಹೆಚ್ಚಾಗಿ ಸ್ಥಳೀಯ ಕಲಾವಿದರು ನಟಿಸುತ್ತಿದ್ದಾರೆ. ಹಾಗಾಗಿ ಇದೊಂದು ಸುಂದರ ಚಿತ್ರವಾಗಿ ಮೂಡಿ ಬರಲಿ ಮತ್ತು ಯಶಸ್ವಿ ನೂರು ದಿನ ಕಾಣಲಿ ಎಂದು ಹಾರೈಸಿದರು.ಜೈ ಗದಾ ಕೇಸರಿ ಚಿತ್ರದ ಯುವ ನಾಯಕ ನಟ ಈಶ್ವರ ನಾಯಕ ಇವರು ಪತ್ರಕರ್ತರನ್ನು ಉದ್ದೇಶಿ ಮಾತನಾಡಿ.ಇತ್ತೀಚಿನ ದಿನಗಳಲ್ಲಿ ನಮ್ಮ ಗತವೈಭವ ವಿಜಯನಗರದಲ್ಲಿ ಸಾಕಷ್ಟು ಯುವ ಪ್ರತಿಭೆಗಳು ಬೆಳಕಿಗೆ ಬರುತ್ತಿದ್ದಾರೆ. ಅತ್ಯಂತ ಸಂತೋಷಕರ ವಿಷಯ

ಚಿತ್ರದ ನಿರ್ದೇಶಕರಿಗೆ ಹಾಗೂ ತಂಡದವರಿಗೆ ಶುಭ ಕೋರಿದರು.

ಈ ಸಂದರ್ಭದಲ್ಲಿ ನಿರ್ದೇಶಕ ಜೋಗಿ ತಾಯಪ್ಪ, ಮುಖಂಡರಾದ ಶ್ಯಾಮ್ ಸಿಂಗ್, ವೆಂಕಟೇಶ್ ಕಾಟವೆ, ಶ್ರೀಕಂಠ, ಪಿ. ವೆಂಕಟೇಶ್, ಗುಜ್ಜಲ ಗಣೇಶ್,ದೇವರಮನಿ ಶ್ರೀನಿವಾಸ್,ಮಂಜುನಾಥ, ಹನುಮಂತಪ್ಪ ಬುಜ್ಜಿ, ಪ್ರಕಾಶ್ ಮೆಹರವಾಡೆ, ಎನ್. ವೆಂಕಟೇಶ್, ಕಂಪ್ಲಿ ಲಕ್ಷ್ಮಣ ಮತ್ತಿತರರು ಉಪಸ್ಥಿತರಿದ್ದರು.

**ವರದಿ ಅಂಬರೀಶ್ ನಾಯಕ್.**



## ಜೈ ಭೀಮ್ ನಗರದಲ್ಲಿ ಅನ್ನ ಸಂತರ್ಪಣೆ

● ವಾರ್ತಾಲೋಕ ವಾರ್ತೆ



**ಹೊಸಪೇಟೆ : ಅ 4.**ದಸರಾ ಹಬ್ಬದ ನಿಮಿತ್ತ ಒಂದನೇ ವಾರ್ಡ್ ಜೈ ಭೀಮ್ ನಗರದ ಜನರು ಶ್ರೀ ಬನ್ನಿ ಮಹಾಂಕಾಳಿ ದೇವಿಗೆ ಪೂಜೆ ಸಲ್ಲಿಸಿ ಸಂಭ್ರಮಿಸಿದರು.

ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಮಲಾಪುರ ಪಟ್ಟಣದಲ್ಲಿ ಸುಮಾರು ವರ್ಷಗಳಿಂದ ಬನ್ನಿ ಮಹಾಕಾಳಿ ದೇವಸ್ಥಾನದ ವತಿಯಿಂದ ಸರ್ವಧರ್ಮದ ಜನಾಂಗದವರು ಒಟ್ಟುಗೂಡಿ ಅನ್ನ ಸಂತರ್ಪಣೆ ಮಾಡಿದ್ದು ಕಂಡು ಬಂತು.

ಈ ಕುರಿತು ದೇವರಾಜ್ ಬರಗೂರು ಮಾತನಾಡಿ ಎಲ್ಲಾ ವರ್ಗದವರು ಸೌಹಾರ್ದತೆಯಿಂದ ಬದುಕ ಬೇಕು ಧಾರ್ಮಿಕ,ಸಂಸ್ಕೃತಿ ಯುವಕರು ಬೆಳೆಸಿಕೊಳ್ಳಬೇಕು. ಇದರ ಜೊತೆಗೆ ಶಿಕ್ಷಣವನ್ನು ಪಡೆಯಬೇಕು ಆಗ ಮಾತ್ರ ಸಮಾಜಕ್ಕೆ ಏನಾದರೂ ಕೊಡುಗೆ ಕೊಡಲು ಸಾಧ್ಯ ಎಂದು ಅಭಿಪ್ರಾಯಪಟ್ಟರು. ಬೆಳೆಯಬೇಕು

ಬಿಜೆಪಿ ಮುಖಂಡ ಯಲ್ಲಪ್ಪ ಮಾತನಾಡಿ

ಈ ಒಂದು ದೇವಸ್ಥಾನಕ್ಕೆ ಹೆಗಲು ಕೊಟ್ಟಿದ್ದು ಮಾಜಿ ಸಚಿವ ಆನಂದ್ ಸಿಂಗ್ ಮತ್ತು ಸಿದ್ದಾರ್ಥ್ ಸಿಂಗ್ ಎಂದು ಹೇಳಿದರು. ಮುಂದಿನ ದಿನಗಳಲ್ಲಿ ಸರ್ಕಾರ ಇಲ್ಲಿ ಖಾಲಿ ಇರುವ ಜಾಗಗಳನ್ನು ಬಡ ಜನಗಳಿಗೆ ಕೊಟ್ಟು ಮತ್ತು ಮನೆಗಳನ್ನು ಕಟ್ಟಿಕೊಡಬೇಕು. ಅತಿ ಶೀಘ್ರವಾಗಿ ಶಿಕ್ಷಣಕ್ಕೆ ಒತ್ತು ಕೊಡುವ ನಿಟ್ಟಿನಲ್ಲಿ ಓದುವಂತಹ ಮಕ್ಕಳಿಗೆ ಲೈಬ್ರರಿಯನ್ನು ಕಟ್ಟಿಕೊಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಹಳ್ಳಿ ಶಿವಪ್ಪ, ಕೆಂಪು ವೀರೇಶ, ಮೇಷನ್ ವೀರೇಶ,ಕೋಳೂರು ಹುಲಿಗೆಮ್ಮ,ನೀಲಮ್ಮ, ಹನುಮವ್ವ,ದುರ್ಗವ್ವ, ಗೌರಮ್ಮ, ಚಂದ್ರ, ಗಿಡ್ಡ, ಬಸಪ್ಪ, ಶ್ರೀನಿವಾಸ,ಸುಬ್ಬು, ಪೂಜಾರಿ ಶಿವರಾಮಪ್ಪ,ಮಲ್ಲಿಕಾರ್ಜುನ,ಗುಂಡು ಪರ್ಸ, ಪೂಜಾರಿ ಕೆಂಚಪ್ಪ, ಪೂಜಾರಿ ಗಾಳಪ್ಪ ಇತರರು ಇದ್ದರು.

**ವರದಿ ಎ ಚಿದಾನಂದ.**

## ಗಾಣಗಟ್ಲೆ ಕೆರೆ ಮಾಯಮ್ಮ ದೇವಸ್ಥಾನದ ಕಳಶ ಪ್ರತಿಷ್ಠಾಪನೆ

● ವಾರ್ತಾಲೋಕ ವಾರ್ತೆ



**ಕೂಡ್ಲಿಗಿ :ಅ 4.** ಕೂಡ್ಲಿಗಿ ತಾಲೂಕಿನ ಹೂಡೇಂ ಗ್ರಾಮದ ಗಾಣಗಟ್ಲೆ ಕೆರೆ ಮಾಯಮ್ಮ ದೇವಾಲಯದ ಗೋಪುರದ ನೂತನ ಕಳಶ ಸ್ಥಾಪನೆಯು ಶುಕ್ರವಾರ ವಿವಿಧ ಹೋಮಗಳೊಂದಿಗೆ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು. ಬೆಳಿಗ್ಗೆಯಿಂದಲೇ ಗ್ರಾಮಸ್ಥರಿಂದ ಗಂಗೆ ಪೂಜೆ ಕಳಸ ಸ್ಥಾಪನೆ ಹೋಮ ಹವನಾದಿಗಳು ನಡೆದವು.

ಬೆಳಿಗ್ಗೆ ಗಾಣಗಟ್ಲೆ ಕೆರೆ ಮಾಯಮ್ಮ ದೇವಿಗೆ ಗಣಪತಿ ಹೋಮ, ವಾಸ್ತು ಹೋಮ, ನವಗ್ರಹ ಹೋಮ, ದುರ್ಗಾ ಹೋಮ, ಅಭಿಷೇಕ ಹಾಗೂ ವಿಶೇಷ ಹೂವಿನ ಅಲಂಕಾರ ನಡೆಯಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ಷ.ಬ್ರ. ಪ್ರಶಾಂತ ಸಾಗರ ಶಿವಚಾರ್ಯ ಮಹಾಸ್ವಾಮಿಗಳು ಹಿರೇಮಠ ಸಂಸ್ಥಾನ ಕೂಡ್ಲಿಗಿ ಇವರು ಅಮೃತಹಸ್ತದಿಂದ ಕುಂಬಾಭಿಷೇಕ ಹಾಗೂ ದೇವಸ್ಥಾನದ ಕಳಸರೋಹಣ ನಡೆಯಿತು.

ದರ್ಶನಕ್ಕೆ ಬಂದಿದ್ದ ನೂರಾರು ಭಕ್ತಾದಿಗಳು ಗಾಣಗಟ್ಲೆ ಕೆರೆ ಮಾಯಮ್ಮ ದೇವಿ ಕುಂಭಾಭಿಷೇಕದಲ್ಲಿ ಭಾಗವಹಿಸಿ ಮಹಾಮಂಗಳಾರತಿ ತೀರ್ಥ ಪ್ರಸಾದಗಳನ್ನು ಪಡೆದು ದೇವರ ಪೂಜೆಯಲ್ಲಿ ಭಾಗಿಯಾದರು. ಈ ಕಾರ್ಯಕ್ರಮದಲ್ಲಿ ಗ್ರಾ.ಪಂ ಅಧ್ಯಕ್ಷ ರಾಮಚಂದ್ರಪ್ಪ, ಮಾಜಿ ತಾ.ಪಂ ಸದಸ್ಯ ಪಾಪ ನಾಯಕ ಹಾಗೂ ದೇವಸ್ಥಾನ ಕಮಿಟಿಯ ಅಧ್ಯಕ್ಷ ಶರಣಪ್ಪ, ಉಪಾಧ್ಯಕ್ಷ ಹೋಳಿಗೆ ಪಾಲಯ್ಯ, ಕಾರ್ಯದರ್ಶಿ ತಿಪ್ಪೇಸ್ವಾಮಿ ಖಜಾಂಚಿ ಶ್ರೀನಿವಾಸ್, ಕೊಂಡ್ಲಹಳ್ಳಿ ತಿಪ್ಪೇಸ್ವಾಮಿ, ಸದಸ್ಯರಾದ ಜರುಗು ಬೋರಯ್ಯ, ರೇವಣ್ಣ, ಎನ್.ಟಿ ಅಯ್ಯಣ್ಣ, ತಿಪ್ಪೇರುದ್ರ, ಬಳಗೇರ್ ಮಂಜಣ್ಣ, ಎ.ಕೆ ರುದ್ರಪ್ಪ, ಮಡಿವಾಳ್ ಮಾರಣ್ಣ, ಮಂಜುನಾಥ್ ಸ್ವಾಮಿ, ನಾಗೇಂದ್ರಪ್ಪ, ಸೂರಣ್ಣ, ತಿಮ್ಮಕ್ಕ ನಾಗರಾಜ್, ಸುಜಾತಾ, ಮಾಯಮ್ಮ ದೇವಿಯ ಅರ್ಚಕರು ಗಿರೀಶ್ ಮತ್ತು ಜಗದೀಶ್ ಸ್ವಾಮಿ, ವೀರೇಶ್ ಸ್ವಾಮಿ, ಗುರುಮೂರ್ತಿ ಸ್ವಾಮಿ ಸೇರಿದಂತೆ ಗ್ರಾಮ ಪಂಚಾಯತಿಯ ಸರ್ವ ಸದಸ್ಯರು, ಹೂಡೇಂ ಗ್ರಾಮಸ್ಥರು ಸುತ್ತಮುತ್ತಲ ಗ್ರಾಮಸ್ಥರು ಹಾಗೂ ಭಕ್ತಾದಿಗಳು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

**ವರದಿ ಹೆಚ್ಚು ವೀರಣ್ಣ.**

## ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷರಾಗಿ ಯಶವಂತರಾಜ್ ನಾಗಿರೆಡ್ಡಿ ಅಧಿಕಾರ ಸ್ವೀಕಾರ



● ವಾರ್ತಾಲೋಕ ವಾರ್ತೆ

**ಬಳ್ಳಾರಿ, ಅ. 04:** ಇತ್ತೀಚೆಗೆ ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಯಶವಂತರಾಜ್ ನಾಗಿರೆಡ್ಡಿ ಅವರು ಇಂದು ಅಧಿಕಾರ ಸ್ವೀಕರಿಸಿದರು.

ಇಷ್ಟು ದಿನಗಳ ಕಾಲ ಪ್ರಭಾರಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಬಿ. ಮಹಾರುದ್ರಗೌಡ ಅವರು ನಾಗಿ ರೆಡ್ಡಿ ಅವರಿಗೆ ಅಧಿಕಾರ ಹಸ್ತಾಂತರ ಮಾಡಿ ಮಾತನಾಡಿ ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗೆ ಈವರೆಗೆ ಅಧ್ಯಕ್ಷರಾಗಿದ್ದ ಬಿ. ಮಹಾರುದ್ರಗೌಡ

ಅವರು, ಸಂಸ್ಥೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಹೊಸಬರಿಗೆ ಸಂಸ್ಥೆಯನ್ನು ಮುನ್ನಡೆಸುವ ಜವಾಬ್ದಾರಿಯನ್ನು ಹಸ್ತಾಂತರ ಮಾಡುತ್ತಿರುವುದಾಗಿ ತಿಳಿಸಿದರು.

ಎಲ್ಲರೂ ನನ್ನನ್ನು ಚೇಂಬರ್ ಆಫ್ ಕಾಮರ್ಸ್ ನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದು ನನಗೆ ಸಂತಸ ತಂದಿದೆ ಈ ಸಂಸ್ಥೆ ವತಿಯಿಂದ ವ್ಯಾಪಾರಸ್ಥರಿಗೆ ಮತ್ತು ಉದ್ದಿಮೆದಾರರಿಗೆ ಅಭಿವೃದ್ಧಿಗಾಗಿ ನನ್ನ ಕೈಲಾದ ಮಟ್ಟಿಗೆ ಸೇವೆಯನ್ನು ಮಾಡುವುದಾಗಿ ಅಧಿಕಾರ ಸ್ವೀಕರಿಸಿದ ನೂತನ ಅಧ್ಯಕ್ಷ ನಾಗರೆಡ್ಡಿ ತಿಳಿಸಿದರು.

ಈ ಸಂದರ್ಭದಲ್ಲಿ ಗೌರವ ಕಾರ್ಯದರ್ಶಿಗಳಾಗಿ ಕೆ.ಸಿ. ಸುರೇಶಬಾಬು, ಹಿರಿಯ ಉಪಾಧ್ಯಕ್ಷರಾಗಿ ಅವ್ವಾರು ಮಂಜುನಾಥ್, ಉಪಾಧ್ಯಕ್ಷರಾಗಿ ಎಸ್. ದೊಡ್ಡನಗೌಡ, ಗಿರಿಧರ ಸೊಂತಾ, ಜಂಟಿ ಕಾರ್ಯದರ್ಶಿಗಳಾಗಿ ಡಾ. ಮರ್ಚೇಡ್ ಮಲ್ಲಿಕಾರ್ಜುನ ಗೌಡ ಮತ್ತು ವಿ. ರಾಮಚಂದ್ರ, ಖಜಾಂಚಿಗಳಾಗಿ ಪಿ. ಪಾಲಣ್ಣ ಮುಂತಾದವರಿದ್ದರು. ನಿಕಟಪೂರ್ವ ಅಧ್ಯಕ್ಷರಾದ ಬಿ. ಮಹಾರುದ್ರಗೌಡ, ಸಿ. ಶ್ರೀನಿವಾಸರಾವ್, ನಾಗಳ್ಳಿ ರಮೇಶ್, ಟಿ. ಶ್ರೀನಿವಾಸರಾವ್ (ವಾಸು), ಸಿ.ಎಸ್. ಸತ್ಯನಾರಾಯಣ, ಜೆ. ರಾಜೇಶ್, ನೇಕಾರ ನಾಗರಾಜ್, ತಾಟಕೂರಿ ಶ್ರೀನಿವಾಸರಾವ್, ಪಿ. ಗಿರೀಶ್, ಎಸ್. ಜಿತೇಂದ್ರ ಪ್ರಸಾದ್, ಬಿ. ಸತ್ಯಬಾಬು, ಯು. ಗೋವಿಂದರೆಡ್ಡಿ, ಸಿಎ ಕೆ. ರಾಜಶೇಖರ್, ವಿ. ವೆಂಕಟೇಶಲು, ಎಚ್. ರಾಜೇಶ್ ಕುಮಾರ್, ಎಸ್.ಪಿ. ವೆಂಕಟೇಶ್, ವಿ.ಕೆ.ಎಲ್. ದೀಪಕ್, ಆರ್. ನಾಗರಾಜ್, ಪಿ. ವೇಣುಗೋಪಾಲ್ ಗುಪ್ತ, ಜಿ. ರಾಘವೇಂದ್ರ ರೆಡ್ಡಿ, ಬಿ. ನಾಗರಾಜ್ ಮತ್ತು ಕೆ. ಗೋಪಾಲರೆಡ್ಡಿ ಅವರ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಮುಂದುವರೆದಿದ್ದಾರೆ.

## ಕಾಳಿಕಾ ದೇವಿ ಜೀರ್ಣೋದ್ಧಾರ ದೇವಿ ಪುರಾಣ ಪ್ರವಚನ ವಿಕಾಸ ಟ್ರಸ್ಟ್ ವತಿಯಿಂದ

● ವಾರ್ತಾಲೋಕ ವಾರ್ತೆ



**ಕೂಡ್ಲಿಗಿ: ಅ4.** ಜಗತ್ತಿನಲ್ಲಿ ಅತೀ ಹೆಚ್ಚು ಧಾರ್ಮಿಕ ಶ್ರದ್ಧಾ ಕೇಂದ್ರಗಳು ಇರುವುದು ಭಾರತದಲ್ಲಿ ಇದು ಈ ಮಣ್ಣಿನ ಹಿರಿಮೆ ಎಂದು ಶ್ರೀ ಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ 1008 ಜಗದ್ಗುರು ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಜೀ ಹೇಳಿದರು. ಶರನ್ನವರಾತ್ರಿ ಅಂಗವಾಗಿ ತಾಲೂಕಿನ ಉಜ್ಜಿನಿ ಗ್ರಾಮದಲ್ಲಿ ಶ್ರೀ ಕಾಳಿಕಾದೇವಿ ದೇವಸ್ಥಾನ ,ಜೀರ್ಣೋದ್ಧಾರ ಹಾಗೂ ಶ್ರೀ ಅಮರ ಶಿಲ್ಪಿ ಜಕಣಾಚಾರ್ಯ ಕುಶಲಕರ್ಮಿಗಳ ವಿಕಾಸ ಟ್ರಸ್ಟ್ ವತಿಯಿಂದ 45 ನೇ ದೇವಿ ಪುರಾಣ ಪ್ರವಚನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಆರ್ಶಿವಚನ ನೀಡಿ ಮಾತನಾಡಿದರು. ಭಾರತ ದೇಶವು ವಿವಿಧತೆಯಲ್ಲಿ ಏಕತೆ ಹೊಂದಿದೆ. ಇಲ್ಲಿ ಪ್ರತಿ ಹಬ್ಬಗಳಿಗೂ ಒಂದು ವಿಶಿಷ್ಠವಾದ ಆಚರಣೆಗಳ ಮೂಲಕ ಅದರ ಪ್ರಾಮುಖ್ಯತೆಯನ್ನು ಜಗತ್ತಿಗೆ ಸಾರುತ್ತ ಬರುತ್ತಿದೆ. ಆ ನಿಟ್ಟಿನಲ್ಲಿ ನವರಾತ್ರಿ ಹಬ್ಬವು ಶಕ್ತಿ ದೇವತೆಯ ಸಂಕೇತ. ಹೆಣ್ಣು ಶಕ್ತಿ ದೇವತೆಯಾಗಿದ್ದು, ತಾಯಿಯಾಗಿ, ಸಹೋದರಿಯಾಗಿ, ಮನೆ ಒಡತಿಯಾಗಿದ್ದು, ನಾವುಗಳು ಗೌರವದಿಂದ ಕಾಣುವುದು ನಮ್ಮ ಧರ್ಮ. ಅದನ್ನು ಮೀರಿ ನಾವುಗಳು ನಡೆದರೆ ಆಪತ್ತು ತಪ್ಪಿದ್ದಲ್ಲ. ಜಾಗತಿಕರಣದ ಭರಾಟೆಯಲ್ಲಿ ಹೆಣ್ಣನ್ನು ಗೌರವಿಸದೇ ತುಚ್ಚ ಭಾವನೆಯಿಂದ ನಡೆಸಿಕೊಳ್ಳುತಿರುವುದು ಅಸಹನೀಯ. ಅಂಥವರು ತಕ್ಕ ಶಾಸ್ತಿಯನ್ನು ಅನುಭವಿಸುತ್ತಾರೆ. ನಾವುಗಳು ಧರ್ಮಮಾರ್ಗದಲ್ಲಿ ನಡೆದು ಹೆಣ್ಣನ್ನು ಗೌರವಿಸಬೇಕಿದೆ. ಅದರಲ್ಲೂ ಮನೆಯಲ್ಲಿ ವೃದ್ಧ ತಂದೆ,ತಾಯಿಗಳನ್ನು ಅತ್ಯಂತ ಪ್ರೀತಿಯಿಂದ ಕಾಣಬೇಕಿದೆ ಎಂದು ತಿಳಿಸಿದರು. ನವರಾತ್ರಿ 9 ದಿನಗಳ ಪುರಾಣದ

ತಾತ್ಪರ್ಯ ಮನುಷ್ಯರಲ್ಲಿನ ಮೋಹ, ಮದ, ಮತ್ಸರಗಳೆಂಬ ಅಷ್ಟ ಮದಗಳನ್ನು ತೊಡೆದು ಹಾಕಿ ಸಾತ್ವಿಕರಾಗಿ ಸಮಾಜದಲ್ಲಿ ಎಲ್ಲರೊಂದಿಗೆ ಭಾತೃತ್ವ ಭಾವನೆಗಳೊಂದಿಗೆ ಜೀವಿಸಬೇಕು ಎನ್ನುವುದೆ ಇದರ ಅರ್ಥ. ಆದ್ದರಿಂದ ಎಲ್ಲರೂ ದಾನವತ್ವ ತೊಡೆದು ಹಾಕಿ ಮನುಷ್ಯತ್ವದಿಂದ ಬಾಳಬೇಕು ಎಂದು ತಿಳಿಸಿದರು.

ಇದೇ ಸಂಧರ್ಭದಲ್ಲಿ ಎಚ್.ಎಂ.ಬಿ.ಗುರುಮೂರ್ತಿ ಸ್ವಾಮಿ ಶಿಕ್ಷಕರು ಪುರಾಣ ಪ್ರವಚನ ನಡೆಸಿದರು, ಪುರೋಹಿತ್ ಸಿದ್ದೇಶ್ ಶರ್ಮ ಪಠಣ ಮಾಡಿದರು. ಮುಖಂಡರಾದ ರೇವಣ್ಣ, ಶಿವಣ್ಣ, ಕಸಾಪ ಅಧ್ಯಕ್ಷ ವೀರೇಶ್ ಅಂಗಡಿ, ಕಜಾಪ ಅಧ್ಯಕ್ಷ ಕೆ.ಎಂ.ವೀರೇಶ್, ಸಾಹಿತಿ ಭೀಮಣ್ಣ ಗಜಾಪುರ, ಬಡಿಗೇರ ನಾಗರಾಜ, ಡಾ.ವೆಂಕಟೇಶ್ ಆಚಾರ್ಯ, ಕುರುಗೋಡು ಸಿದ್ದೇಶ್, ಶ್ರೀ ಕಾಳಿಕಾದೇವಿ ದೇವಸ್ಥಾನ ,ಜೀರ್ಣೋದ್ಧಾರ ಹಾಗೂ ಶ್ರೀ ಅಮರ ಶಿಲ್ಪಿ ಜಕಣಾಚಾರ್ಯ ಕುಶಲಕರ್ಮಿಗಳ ವಿಕಾಸ ಟ್ರಸ್ಟ್ ನ ಅಧ್ಯಕ್ಷ ಮರುಳಸಿದ್ದ ಆಚಾರ್ಯ, ಗೌರವಾಧ್ಯಕ್ಷ ಬಿ.ರವೀಂದ್ರ ಆಚಾರ್ಯ, ಉಪಾಧ್ಯಕ್ಷ ಸಿದ್ದೇಶ್ ಆಚಾರ್ಯ, ಕಾರ್ಯದರ್ಶಿ ಬಿ.ಶಿವಾಚಾರ್ಯ ಸೇರಿದಂತೆ ಪದಾಧಿಕಾರಿಗಳು, ಗ್ರಾಮಸ್ಥರು ಇದ್ದರು.

**ವರದಿ ಹೆಚ್ಚು ವೀರಣ್ಣ.**

# ಕ್ರಿಕೆಟ್ ಪಂದ್ಯಾವಳಿ: ಟ್ರೋಫಿ ತುಂಗಳ ಸಿ.ಬಿ.ಎಸ್.ಇ ಮಡಿಲಿಗೆ




**ಬೀಳಗಿ :** ತಾಲೂಕಿನ ಅನಗವಾಡಿಯ ಬನಶಂಕರಿದೇವಿ ವಿದ್ಯಾ ಸಂಸ್ಥೆಯ ಪ್ರತಿಷ್ಠಾನದ ಬಿ.ಎನ್.ಖೋತ ಅಂತರಾಷ್ಟ್ರೀಯ ಪಬ್ಲಿಕ್ ಶಾಲೆ ಮತ್ತು ಬಿ.ಎನ್.ಖೋತ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಮಹಾವಿದ್ಯಾಲಯ ಸಂಂಯುಕ್ತಾಶ್ರಯದಲ್ಲಿ ನಾಡಹಬ್ಬ ದಸರಾ ಹಬ್ಬದ ಪ್ರಯುಕ್ತ 16 ವರ್ಷದೊಳಗಿನ ಬಾಲಕರಿಗೆ ಅಂತರ್ ಪ್ರೌಢ ಶಾಲಾ ಕ್ರಿಕೆಟ್ ಪಂದ್ಯಾವಳಿಯನ್ನು ಸೆ.24,25,26 ಮತ್ತು27ರ ವರೆಗೆ ಜರುಗಿದವು. 30ಕ್ಕಿಂತ ಹೆಚ್ಚು ತಂಡಗಳು ಭಾಗವಹಿಸಿದ್ದವು.

ವಿಜಯಪುರದ ತುಂಗಳ ಸಿ.ಬಿ.ಎಸ್.ಇ ಸ್ಕೂಲ್ ಪ್ರಥಮ ಬಹುಮಾನದೊಂದಿಗೆ ರೂ.1ಲಕ್ಷ ಜೊತೆಗೆ ಕ್ರಿಕೆಟ್ ಟ್ರೋಫಿ, ಪ್ರಶಸ್ತಿ ಪತ್ರ ಪಡೆದರೆ, ಗುಳೇದಗುಡ್ಡದ ನೆಹರು ಇಂಟರ್ ನ್ಯಾಶನಲ್ ಪಬ್ಲಿಕ್ ಸ್ಕೂಲ್ ದ್ವಿತೀಯ ಬಹುಮಾನ ರೂ.50 ಸಾವಿ, ಪ್ರಶಸ್ತಿ ಪತ್ರ ಪಡೆದಿದೆ. ಹಾಗೂ ಬಾಗಲಕೋಟೆಯ ಸೈಂಟ್ ಆನ್ಸ್ ಸ್ಕೂಲ್ ಐ.ಸಿ.ಎಸ್.ಇ ತೃತೀಯ ಬಹುಮಾನದೊಂದಿಗೆ ರೂ.20 ಸಾವಿರ, ಪ್ರಶಸ್ತಿ ಪತ್ರವನ್ನು ಪಡೆದುಕೊಂಡವು. ತುಂಗಳ ಸಿ.ಬಿ.ಎಸ್.ಇಶಾಲೆಯ ವಿದ್ಯಾರ್ಥಿ ಮ್ಯಾನ್ ಆಫ್ ದಿ ಮ್ಯಾಚ್ ಅಮರ ಕೋಲೂರ, ಕೆ.ಎಲ್.ಇಯ ಬಸವಪ್ರಭು, ಸಿ.ಬಿ.ಎಸ್.ಇ ಸ್ಕೂಲ್, ಅಂಕಲಿಯ ವಿದ್ಯಾರ್ಥಿ ಬೆಸ್ಟ್ ಬ್ಯಾಟ್ಸಮನ್, ವಿವೇಕಾನಂದ ರಾಯಮಾನೆ, ಸೈಂಟ್ ಆನ್ಸ್ ಸ್ಕೂಲ್ ಐ.ಸಿ.ಎಸ್.ಇ ಬಾಗಲಕೋಟ ವಿದ್ಯಾರ್ಥಿ ಬೆಸ್ಟ್ ಬಾಲರ್ ಧ್ರುವರಾಜ ಜಾಧವ ತಮ್ಮ ಬಹುಮಾನಗಳನ್ನು ಮುಡಿಗೇರಿಸಿಕೊಂಡಿದ್ದಾರೆ.

ಕ್ರಿಕೆಟ್‌ನಲ್ಲಿ ವಿಜಯ ಸಾಸಿದ ಮಕ್ಕಳಿಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಸವರಾಜ ಖೋತ ಅಭಿನಂದನೆಗಳನ್ನು ಸಲ್ಲಿಸಿದರು. ಸಂಸ್ಥೆಯ ಸದಸ್ಯರಾದ ಶೋಭಾ ಖೋತ, ಖಜಾಂಚಿ ವಿಕ್ರಮ್ ಖೋತ, ಪ್ರಾಂಶುಪಾಲ ಸುರೇಶ ಹವಾಲ್ದಾರ ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ನಿರ್ಣಾಯಕರಾದ ವಿನಾಯಕ ಕಮ್ಮಾರ, ಅನೀಲ ಕೋರಿ, ವೀಕ್ಷಕ ವಿವರಣಾಕಾರ ಜೀವನ ಗಾಯಕವಾಡ, ಶಿವನಗೌಡ ಪಾಟೀಲ ಮತ್ತು ಕಲ್ಮೇಶ ಬೀಳಗಿ, ಮಧ್ಯಸ್ಥಗಾರರು ಮಹಾಂತೇಶ ಚಟ್ನಳ್ಳಿ, ಪುನೀತ ಕದ್ರೊಳ್ಳಿ ಮತ್ತು ರಾಚಯ್ಯ ಚರಂತಿಮಠ, ವಿದ್ಯಾ ಬೇವಿನಕಟ್ಟಿ ನಿರ್ವಹಿಸಿದರು.

# ವಿಶ್ವ ರೇಬಿಸ್ ದಿನಾಚರಣೆ



**ಬಾಗಲಕೋಟೆ;**ಜಿಲ್ಲಾಡಳಿತ,ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಜಿಲ್ಲಾ ಸಮೀಕ್ಷಾಧಿಕಾರಿಗಳ ಕಾರ್ಯಾಲಯದ ಸಹಯೋಗದಲ್ಲಿ ನಗರದ ಕಾಲೇಜ್ ಆಫ್ ನರ್ಸಿಂಗ್‌ನ ಸಭಾಭವನದಲ್ಲಿ ವಿಶ್ವ ರೇಬಿಸ್ ದಿನಾಚರಣೆ ಕಾರ್ಯಕ್ರಮ ಆಚರಿಸಲಾಯಿತು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುವರ್ಣ ಕುಲಕರ್ಣಿ ಕಾರ್ಯಕ್ರಮವನ್ನು ಸಸಿಗೆ ನೀರುಣಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು ರೇಬೀಸ್ ಮಾರಣಾಂತಿಕವಾಗಿದ್ದು ನಿರ್ಲಕ್ಷ ವಹಿಸಬಾರದು. ಮೂರು ಹೆಜ್ಜೆಗಳನ್ನು ಅನುಸರಿಸಬೇಕು. ಈ ವರ್ಷದ ಘೋಷಣೆ ರೇಬೀಸ್ ಗಡಿಗಳನ್ನು ಮೀರಿ ಮುಂದುವರಿಯೋಣ ಎಂದರು.

ಜಿಲ್ಲಾ ಸಮೀಕ್ಷಾಧಿಕಾರಿ ಡಾ.ದಯಾನಂದ ಕರೆಣ್ಣವರ ಮಾತನಾಡಿ, ಫ್ರೆಂಚ್ ವೈದ್ಯ ವಿಜ್ಞಾನಿ ಲೂಯಿ ಪ್ಯಾಶ್ಚರ್ ರವರು ರೇಬೀಸ್ ಕಾಯಿಲೆಗೆ ಲಸಿಕೆ ಕಂಡು ಹಿಡಿದ್ದಾರೆ. ಅವರು 28 ಸೆಪ್ಟಂಬರ 1895 ರಂದು ಮರಣ ಹೊಂದಿದರು. ಅವರ ಸ್ಮರಣೆಗಾಗಿ ಪ್ರತಿ ವರ್ಷ ಸೆಪ್ಟಂಬರ 28 ರಂದು ಜಗತ್ತಿನಾದ್ಯಂತ ಶಾಲೆ ಕಾಲೇಜುಗಳಲ್ಲಿ ಮತ್ತು ಸಮುದಾಯದಲ್ಲಿ ರೇಬೀಸ್ ರೋಗದ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಅಲ್ಲದೇ 2030ಕ್ಕೆ ರೇಬೀಸ್ ರೋಗವನ್ನು ಶೂನ್ಯಗೊಳಿಸುವುದು ಈ ದಿನದ ಉದ್ದೇಶವಾಗಿದೆ ಎಂದರು.

ಮುಖ್ಯ ಪಶು ವೈದ್ಯಾಧಿಕಾರಿ ಡಾ.ವೆಂಕಟೇಶ ಸಂಕ್ರಿ ಮಾತನಾಡಿ ಪ್ರಾಣಿಗಳಲ್ಲಿ ಮತ್ತು ಮನುಷ್ಯರಲ್ಲಿ ರೇಬೀಸ್ ಲಕ್ಷಣಗಳ ಬಗ್ಗೆ ಮತ್ತು ನಿಯಂತ್ರಣ ಕ್ರಮ ಚಿಕಿತ್ಸೆ ಬಗ್ಗೆ ತಿಳಿಸಿದರು. ಸಹಾಯಕ ಕಾರ್ಯಪಾಲಕ ಅಭಿಯಂತರರ(ಪರಿಸರ) ಸತೀಶ ಖಜ್ಜಿಡೋಣಿ ಮಾತನಾಡಿ ನಗರ ಪ್ರದೇಶದಲ್ಲಿ ಬೀದಿ ನಾಯಿ ಮತ್ತು ಸಾಕು ನಾಯಿಗಳ ಬಗ್ಗೆ ನಗರ ಪರಿಸರ ಸ್ವಚ್ಛತೆ ಬಗ್ಗೆ ತಿಳಿಸಿದರು. ಜಿಲ್ಲಾ ಸೋಂಕು ಶಾಸ್ತ್ರಜ್ಞರಾದ ಡಾ.ಸೀಮಾ ಹುದ್ದಾರ ಅವರು ರೇಬೀಸ್ ಕುರಿತು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ.ಕುಸುಮಾ ಮಾಗಿ, ತಾಲೂಕಾ ಆರೋಗ್ಯಾಧಿಕಾರಿ ಡಾ.ಸರಸ್ವತಿ ಮಾಗಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಶಿಕಲಾ ಶಿನ್ನೂರು, ಕಾಲೇಜ್ ಆಫ್ ನರ್ಸಿಂಗ್ ಪ್ರಾಚಾರ್ಯ ಡಾ.ಉತ್ತಲಭಾಷಾ ಧಂದರಗಿ, ಡಾ.ಸುರೇಶಗೌಡ ಪಾಟೀಲ ಸೇರಿದಂತೆ ಆಶಾ ಕಾರ್ಯಕರ್ತರು, ಕಾಲೇಜಿನ ಉಪನ್ಯಾಸಕರು, ಎಲ್ಲ ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಚ್.ಪಿ.ನಾಯ್ಕರ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# 13 ರಂದು ಜಮಖಂಡಿ ತಾಲೂಕು ಸಾಹಿತ್ಯ ಸಮ್ಮೇಳನ



**ಜಮಖಂಡಿ:** ನಗರದ ಬಸವ ಭವನದಲ್ಲಿ ಅ.13 ರಂದು ಜಮಖಂಡಿ ತಾಲೂಕು 9ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದೆ ಎಂದು ಸ್ವಾಗತ ಸಮಿತಿ ಅಧ್ಯಕ್ಷ, ಶಾಸಕ ನಾಡೋಜ ಜಗದೀಶ ಗುಡಗುಂಟಿ ಹೇಳಿದರು.

ನಗರದ ಸಾಕ್ಷಾತ್ಕಾರ ನಿವಾಸದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಸಮ್ಮೇಳನದ ಸರ್ವಾಧ್ಯಕ್ಷರಾಗಿ ರುದ್ರಾವಧೂತ ಮಠದ ಸಹಜಾನಂದ ಶ್ರೀಗಳನ್ನು ಆಯ್ಕೆ ಮಾಡಲಾಗಿದೆ. ಸಮ್ಮೇಳನ ಯಶಸ್ವಿಗೊಳಿಸುವ ನಿಟ್ಟಿನಲ್ಲಿ ವಿವಿಧ ಸಮಿತಿ ರಚಿಸಲಾಗಿದೆ ಎಂದರು.

ಕಸಾಪ ಕೋಶಾಧ್ಯಕ್ಷ ಡಾ. ಉಮೇಶ ಮಹಾಬಳಶೆಟ್ಟಿ ಮಾತನಾಡಿ, ತಾಲೂಕು ಸಾಹಿತ್ಯ ಸಮ್ಮೇಳನ ಮಾರ್ಚ್ ತಿಂಗಳಿನಲ್ಲಿ ನಡೆಯಬೇಕಿತ್ತು. ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಸಮ್ಮೇಳನ ಮುಂದೂಡಲಾಗಿತ್ತು ಎಂದು ತಿಳಿಸಿದರಲ್ಲದೆ, ಅರ್ಥಪೂರ್ಣವಾಗಿ ಸಮ್ಮೇಳನ ಆಚರಣೆ, ಸ್ಮರಣ ಸಂಚಿಕೆ ಬಿಡುಗಡೆಗೆ ವಾರದಲ್ಲೇ ಎಲ್ಲ ಸಿದ್ಧತೆ ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದರು.

ಸಲಹಾ ಸಮಿತಿ ಸದಸ್ಯ ಡಾ.ಟಿ.ಪಿ. ಗಿರಡ್ಡಿ ಮಾತನಾಡಿ, ಅ.13 ರಂದು ಬೆಳಗ್ಗೆ 7 ಗಂಟೆಗೆ ಧ್ವಜಾರೋಹಣದೊಂದಿಗೆ ಸಮ್ಮೇಳನಕ್ಕೆ ಚಾಲನೆ ನೀಡಲಾಗುವುದು. ಹಳೇ ತಹಸೀಲ್ದಾರ್ ಕಚೇರಿ ಆವರಣದಿಂದ ಬಸವ ಭವನವರೆಗೆ ಸರ್ವಾಧ್ಯಕ್ಷರ ಮೆರವಣಿಗೆ ನಡೆಯಲಿದೆ. 10 ಗಂಟೆಗೆ ಅಥಣಿ,ಮೋಟಗಿ ಮಠದ ಪ್ರಭು ಚನ್ನಬಸವ ಶ್ರೀಗಳು ಸಾನ್ನಿಧ್ಯ ವಹಿಸುವರು. ಮಹಿಳೆ, ದಲಿತ, ಸಾಹಿತ್ಯ ಗೋಷ್ಠಿಗಳು ನಡೆಯಲಿವೆ. ಸಾಧಕರಿಗೆ ಸನ್ಮಾನ, ನಿರ್ಣಯ, ಛಾಯಾಚಿತ್ರ ಪ್ರದರ್ಶನ, ವಸ್ತು ಪ್ರದರ್ಶನ, ಮಾರಾಟ ಮಳಿಗೆಗಳನ್ನು ತೆರೆಯಲಾಗುವುದೆಂದು ತಿಳಿಸಿದರು.

ಇದೇ ವೇಳೆ ಸಮ್ಮೇಳನದ ಲಾಂಚನ, ಭಿತ್ತಿ ಪತ್ರ ಬಿಡುಗಡೆಗೊಳಿಸಲಾಯಿತು.

ಹಿರಿಯ ನ್ಯಾಯವಾದಿ ಎನ್.ಎಸ್. ದೇವರವರ, ಕಸಾಪ ತಾಲೂಕು ಅಧ್ಯಕ್ಷ ಸಂತೋಷ ತಳಕೇರಿ, ವಿನೋದ ಲೋಣಿ ಇತರರಿದ್ದರು.

# ಕಾಮಗಾರಿ ಪರಿಶೀಲನೆ

**ಲಕ್ಷ್ಮೇಶ್ವರ ;** ಗದಗ ಜಿಲ್ಲಾ ಉಸ್ತುವಾರಿ ಮತ್ತು ಕಾನೂನು ಸಂಸದೀಯ ಹಾಗೂ ಪ್ರವಾಸೋದ್ಯಮ ಸಚಿವರಾದ ಎಚ್. ಕೆ.ಪಾಟೀಲರವರು ರವಿವಾರ ಶಿಗ್ಲಿಗೆ ಹೋಗುವ ಮಾರ್ಗ ಮಧ್ಯದಲ್ಲಿ ನಿರ್ಮಾಣ ಹಂತದಲ್ಲಿರುವ ಇಂದಿರಾ ಕಾಂಟೀನ್ ಕಾಮಗಾರಿಯನ್ನು ಪರಿಶೀಲನೆ ಮಾಡಿದರು.

ಬಳಿಕ ಅವರು ಕಾಮಗಾರಿ ಕುರಿತಂತೆ ಮುಖ್ಯಾಧಿಕಾರಿ ಮಹೇಶ ಹಡಪದವರಿಗೆ ಕೆಲವೊಂದು ಸಲಹೆ ಸೂಚನೆ ನೀಡಿ ಸರಕಾರದ ಅತ್ಯಂತ ಮಹತ್ವಾಕಾಂಕ್ಷಿ ಯೋಜನೆಯಾದ ಮತ್ತು ಬಡವರ ಪರವಿರುವ ಇಂದಿರಾ ಕ್ಯಾಂಟಿನನ್ನು ಆದಷ್ಟು ಬೇಗ ಆರಂಭಿಸಿ ಬಡವರಿಗೆ ಅನುಕೂಲ ಆಗುವಂತೆ ನೋಡಿಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷೆ ಯಲ್ಲವ್ವ ದುರ್ಗಣ್ಣವರ ಉಪಾಧ್ಯಕ್ಷ ಫೀರ್ದೋಷ ಆಡೂರ ಸೇರಿದಂತೆ ಸದಸ್ಯರು ಕುಡಿಯುವ ನೀರಿನ ಯೋಜನೆ ಮಂಜೂರ ಆಗಿರುವ 39 ಕೋಟಿ ಅನುದಾನವನ್ನು ಸರಕಾರದಿಂದ ಮಂಜೂರ ಮಾಡಿಸುವಂತೆ ಮನವಿ ಮಾಡಿದರು.

ಇದಕ್ಕೆ ಸ್ಪಂದಿಸಿದ ಸಚಿವ ಎಚ್ ಕೆ ಪಾಟೀಲರವರು ಸಂಬಂಧಿಸಿದ ಸಚಿವರೊಂದಿಗೆ ಚರ್ಚಿಸಿ ಕೂಡಲೆ ಅನುದಾನ ಬಿಡುಗಡೆಗೆ ಪ್ರಯತ್ನಿಸುವದಾಗಿ ಬರವಸೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಜಿ.ಎಸ್. ಗಡ್ಡದೇವರಮಠ ರಾಮಣ್ಣ ಲಮಾಣಿ ಗುರುನಾಥ ದಾನಪ್ಪನವರ ತಾಲೂಕ ಪಂಚಾಯತಿ ಮಾಜಿ ಸದಸ್ಯ ಚನ್ನಪ್ಪ ಜಗಲಿ ದಾದಾಪೀರ ಮುಚಾಲೇ ಮುಖ್ಯಾಧಿಕಾರಿ ಮಹೇಶ ಹಡಪದ ಸದಸ್ಯರುಗಳಾದ ಮಹೇಶ ಹೊಗೆಸೊಪ್ಪಿನ ಬಸವರಾಜ ಓದನವರ ಪ್ರವೀಣ ಬಾಳಿಕಾಯಿ ಮುಷ್ತಾಕ್ ಅಹ್ಮದ ಶಿರಹಟ್ಟಿ ಹಿರಿಯ ಆರೋಗ್ಯ ನಿರೀಕ್ಷ ಮಂಜುನಾಥ ಮುದಗಲ್ಲ ರಫೀಕ್ ಕಲಬುರಗಿ ಫಕ್ಕಿರೇಶ ನಂದೆಣ್ಣವರ ದೀಪಕ್ ಲಮಾಣಿ, ಅಣ್ಣಪ್ಪ ರಾಣಗೇರಿ ಸೇರಿದಂತೆ ಅನೇಕರು ಹಾಜರಿದ್ದರು.

# ಗರ್ಭಿಣಿಯರು ಪೌಷ್ಟಿಕ ಆಹಾರ ಸೇವಿಸಿ



**ಆಲಮೇಲ :** ಗರ್ಭಿಣಿ ಸ್ತ್ರೀಯರು ಪೌಷ್ಟಿಕ ಆಹಾರ ಸೇವಿಸುವ ಮೂಲಕ ಸದೃಢ ಮಕ್ಕಳನ್ನು ಪಡೆಯಬಹುದಾಗಿದೆ ಎಂದು ಅಲಮೇಲ್ ವೈದ್ಯಾಧಿಕಾರಿ ಡಾ. ಜಿ.ಎಸ್. ಪತ್ತಾರ್ ಹೇಳಿದರು

ಅವರು ತಾಲೂಕಿನ ದೇವಣಗಾಂವ ಗ್ರಾಮದ ಗ್ರಾಮ ಪಂಚಾಯತ್ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ಪೋಷಣ ಅಭಿಯಾನ ಮಾಸಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು. ತಾಯಂದಿರು ಗರ್ಭಿಣಿಯರಿದ್ದಾಗ ಉತ್ತಮ ಪೋಷಕಾಂಶಗಳಿರುವ , ಖನಿಜ ಲವಣಾಂಶ ಮತ್ತು ನಾರಿನಂಶ ಇರುವಂತಹ ಆಹಾರಗಳನ್ನು ಹೆಚ್ಚಾಗಿ ಸೇವಿಸುವುದರಿಂದ ಜನಿಸುವ ಮಗು ಸದೃಢವಾಗಿ ಆರೋಗ್ಯವಾಗಿ ಜನಿಸುವ ಮೂಲಕ ದೇಶಕ್ಕೆ ಒಬ್ಬ ಸದೃಢ ಪ್ರಜೆಯನ್ನು ನೀಡಿದಂತಾಗುವುದು ಎಂದರು.

ದೇವಣಗಾಂವ ಪಿ ಎಚ್ ಸಿ ಓ ಶ್ರೀಮತಿ ಎಸ್ ಐ ಕಲಶೆಟ್ಟಿ, ಸಂತೋಷ್ ಕುಂಬಾರ, ಈರಣ್ಣ ಯಡ್ರಾಮಿ, ಶ್ರೀಮತಿ ರೇಣುಕಾ ಕುಲ ಕೋಟಿಗೇರ , ಗ್ರಾಪಂ ಕಾರ್ಯದರ್ಶಿ ಎನ್.ಎ. ಬಂಡಗಾರ, ಮಾರ್ಥಂಡ ವಗ್ಗೆ, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು, ಆಶಾ ಕಾರ್ಯಕರ್ತೆಯರು, ಗ್ರಾಮ ಪಂಚಾಯತಿ ಸಿಬ್ಬಂದಿ ಹಾಜರಿದ್ದರು

# ಡಿಜಿಟಲ್ ಅಂಚೆ ಕಚೇರಿಯಲ್ಲಿ ತುಕ್ಕು ಹಿಡಿದ ಅಂಚೆ ಡಬ್ಬ

● ವಾರ್ತಾಲೋಕ ವಾರ್ತೆ



**ಹರಪನಹಳ್ಳಿ : ಅ4.** ಅಂಚೆ ಡಬ್ಬ (ಪೋಸ್ಟ್ ಬಾಕ್ಸ್) ಸುಮಾರು 2000 ಇಸವಿಯ ಹಿಂದೆ ತಕ್ಕ ಮಟ್ಟಿಗೆ ಮಾನ್ಯತೆ ಪಡೆದ ಸಂಚಾರ ವಿಷಯದ ಡಬ್ಬವಾಗಿತ್ತು , ಅಂಚೆ ಡಬ್ಬವನ್ನು ನೆನೆಯುವ ಕಾಲದಲ್ಲಿ ನಮ್ಮೂರಿನ ಅಂಚೆ ಡಬ್ಬ ತುಕ್ಕು ಹಿಡಿದು ಮರಕ್ಕೆ ನೇತಾಡುತ್ತಿದೆ , ನಾನು ಅಂಚೆ ಕಚೇರಿಯ ಬಗ್ಗೆ ಮಾತನಾಡುತ್ತಿಲ್ಲ , ಅಂಚೆ ಕಚೇರಿ ಯಾವಾಗಲೂ ಇರುತ್ತೆ ಹಾಗೆ ಆಧುನಿಕ ತಂತ್ರಜ್ಞಾನದ ಮೂಲಕ ನವೀಕರಣಗೊಳ್ಳುತ್ತಿದೆ , ಈಗ ಡಿಜಿಟಲ್ ಅಂಚೆ ಕಛೇರಿಯ ಸೇವೆಗಳು ದೊರೆಯುತ್ತಿವೆ, ನಾವು ಕೂಡ ಬಳಕೆದಾರರಾಗಿ ಬಳಸುತ್ತಿದ್ದೇವೆ . ನಾನು ನೋಡಿದ ಅಂಚೆ ಡಬ್ಬದ ಬಗ್ಗೆ ಮಾತನಾಡುವೆ , ಇದರ ವಿಶೇಷತೆ, ಪ್ರಾಮುಖ್ಯತೆ, ಅನುಕೂಲತೆ , ತಂತ್ರಜ್ಞಾನವನ್ನು ಹೊರತು ಪಡಿಸಿ ಆದ ಸಹಾಯ , ಇದರಲ್ಲಿ ಬಿದ್ದ ಎಷ್ಟೋ ಅಂಚೆ ಪತ್ರಗಳ ವಿಶೇಷತೆ, ದೂರದಿಂದ ದೂರಕ್ಕೆ ಸೇರುವ ಪತ್ರಗಳ ಸಂಗಮ ಸಂಬಂಧ ನನಗೆ ತಿಳಿದ ಮಟ್ಟಿಗೆ ನಿಮ್ಮ ಮುಂದೆ ವ್ಯಕ್ತ ಪಡಿಸುವೆ.

ನಮ್ಮ ಊರಿನ ಅಂಚೆಯ ಪಿನ್ ಕೋಡ್ "583125" ನಾನು ಸಿದ್ಧಗಂಗಾ ಮಠದಲ್ಲಿ ಓದುತ್ತಿರುವಾಗ ಮೊದಲ ಬಾರಿಗೆ ಆಧಾರ್ ಕಾರ್ಡ್ ಮಾಡಿಸಲು ಅಂಚೆ ಪಿನ್ ಕೋಡ್ ನನಗೆ ಗೊತ್ತಿರಾದ ಕಾರಣ ನಮ್ಮ ಊರಿನ ವಿಳಾಸವನ್ನು ನಮೂದಿಸದೆ , ಸಿದ್ದಗಂಗಾ ಮಠದ ವಿಳಾಸವನ್ನು ನಮೂದಿಸಿ ಬಿಟ್ಟರು ಆಗ , ನಾನು ಯಾವುದೇ ಅರ್ಜಿ ಸಲ್ಲಿಸಿದ್ರು ಆಧಾರ್ ಕಾರ್ಡ್ ವಿಳಾಸವನ್ನೆ ನಮೂದಿಸಬೇಕಿತ್ತು , ಮನೆಗೆ ಫೋನ್ ಮಾಡುವ ಮೂಲಕ ನಮ್ಮೂರಿನ ಅಂಚೆ ಪಿನ್ ಕೋಡ್ ತಿಳಿದುಕೊಂಡೆ ಆಗ ನನಗೂ ಮತ್ತು ಅಂಚೆ ಡಬ್ಬಕ್ಕೂ ತುಂಬಾ ಆತ್ಮೀಯ ಸಂಬಂಧ ಬೆಳೆಯಿತು , ಅಲ್ಲಿಂದ ಅಂಚೆ ಕಚೇರಿಗೆ ರಜೆಯ ದಿನಗಳಲ್ಲಿ ಹೋಗತೊಡಗಿದೆ . ನಮ್ಮ ಸಿದ್ಧಗಂಗಾ ಮಠದ ಒಳಗೆ ಅಂಚೆ ಕಚೇರಿ ಇರುವ ಕಾರಣ ನನಗೆ ತುಂಬಾ ಸಹಾಯ ಆಯಿತು, ಆರನೇ ತರಗತಿ ವಿದ್ಯಾರ್ಥಿ ನಾನು , ಒಂದು ರೂಪಾಯಿಗೆ ಎರಡು ಕಾರ್ಡ್ ತೆಗೆದುಕೊಳ್ಳುತ್ತಿದ್ದೆ , ಇಂದ ಮತ್ತು ಇವರಿಗೆ ಎನ್ನುವ ಸ್ಥಳದಲ್ಲಿ ಮೊದಲ ಬಾರಿಗೆ ತಪ್ಪು ತಪ್ಪಾಗಿ ಬರೆದು ಅಂಚೆ ಡಬ್ಬದಲ್ಲಿ ಹಾಕುತ್ತಿದ್ದ , ಒಂದು ದಿನ ಅಂಚೆ ಕಚೇರಿಯಲ್ಲಿ ಕೆಲಸ ಮಾಡುವ ಆಫೀಸರ್ ಒಬ್ಬರು ಕೊಡು ನಿನ್ನ ಪತ್ರ ಅಂತ ಕೇಳಿದಾಗ ಕೊಟ್ಟೆ ಆಗ ಸರಿ ತಪ್ಪುಗಳು ನನಗೆ ತಿಳಿಯಿತು, ನಂತರ ಅಲ್ಲೆ ಮತ್ತೇರಡು ತೆಗೆದುಕೊಂಡು ಸರಿಯಾಗಿ ಬರೆದೆ ಅಮ್ಮರ ಊರಿಗೆ ಒಂದು , ನಮ್ಮ ಊರಿಗೆ ಒಂದು , ಇಂದ ಭೋವಿ ರಾಮಚಂದ್ರ , ಆರನೇ ತರಗತಿ , ಕೆ, ವಿಭಾಗ ,ಸಿದ್ಧಗಂಗಾ ಮಠ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ , ಮತ್ತೆ ಗೆ ಯಾರಿಗೆ ಎಂದರೆ ನವಲಿ ಸಿದ್ಧಪ್ಪ , ಹೊನ್ನೇನಹಳ್ಳಿ ಗ್ರಾಮ , ಹರಪನಹಳ್ಳಿ ತಾಲೂಕು, ಆಗ ದಾವಣಗೆರೆ ಜಿಲ್ಲೆ, ಮತ್ತೊಂದು ನಮ್ಮ ಊರಿಗೆ , ಹಾಲೇಶಪ್ಪ , ರಾಮಘಟ್ಟ ,ಹರಪನಹಳ್ಳಿ ತಾಲೂಕು, ದಾವಣಗೆರೆ ಜಿಲ್ಲೆ. ಈ ಎರಡು ಪತ್ರಗಳು ಮೂರು ನಾಲ್ಕು ದಿನಕ್ಕೆ ಹೋಗಿ ಸೇರಿಕೊಂಡವು. ಪತ್ರಗಳನ್ನು ಕಳಿಸಿ ರಜೆ ದಿನಗಳಲ್ಲಿ ಪೋನ್ ಮಾಡಿ ಕೇಳುತ್ತಿದ್ದೆ ಅಂಚೆ ಪತ್ರಗಳು ಬಂದಿದ್ದವ ಅಂತ ಆಗ ಅಂಚೆ ಡಬ್ಬದಲ್ಲಿ ತಿಂಗಳಿಗೆ ಏಳೆಂಟು ಪತ್ರಗಳು ಹಾಕುತ್ತಿದ್ದೆ ಹೀಗೆ ಅಂಚೆ ಕಚೇರಿಯ ಬಗ್ಗೆ ಮತ್ತು ಡಬ್ಬದ ಬಗ್ಗೆ ತಿಳಿದ್ದಿದ್ದು ಆಗ , ಆವಾಗ ಅಂಚೆ ಡಬ್ಬಗಳು ಬಣ್ಣದಿಂದ ತುಂಬಿ ತುಳುಕುತ್ತಿತ್ತು ಈಗ ತುಕ್ಕು ಹಿಡಿದಿವೆ.

ಈಗೆಲ್ಲಾ ಸ್ಮಾರ್ಟ್ ಫೋನ್ ಗಳು ರಾರಾಜಿಸುತ್ತಿವೆ ಆದರೆ ಇಪ್ಪತ್ತೈದು ವರ್ಷಗಳ ಹಿಂದೆ ಇಷ್ಟೇಲ್ಲಾ ಪೋನ್ ಗಳ ಬಳಕೆ ಇರಲಿಲ್ಲ , ಎಸ್ ಟಿ ಡಿ ಬೂತ್ ಮತ್ತು ಶ್ರೀಮಂತರ ಮನೆಯಲ್ಲಿ ಕೀಬೋರ್ಡ್ ಮೊಬೈಲ್ ಫೋನ್ ಗಳು ಇದ್ದವು , ಯಾವುದಾದರೂ ವಿಷಯಗಳು ತಲುಪಬೇಕಾದರೆ ರಾಜ್ಯ ಮತ್ತು ಹೊರ ರಾಜ್ಯದಲ್ಲಿ ತುಂಬಾ ಸಮಯ ಬೇಕಿತ್ತು, ಅಂಚೆ ಪತ್ರ ಬರೆಯುವುದರಿಂದ ಭಾಷಾ ಜ್ಞಾನ, ಬರವಣಿಗೆ ಜ್ಞಾನ ಎರಡು ತುಂಬಾ ಅತಿ ಅಮೂಲ್ಯವಾಗಿತ್ತು ಈಗ ಭಾಷಾ ಜ್ಞಾನ ಇಲ್ಲ ಏನು ಇಲ್ಲ ಬರೇ ತಲೆಯಲ್ಲಿ ಮಣ್ಣು , ಪತ್ರ ಬರೆಯುವಾಗ ಶ್ರೀ ಮತ್ತು ಶ್ರೀಮತಿ , ನೀವು ಕ್ಷೇಮವೇ ಎಂದು ತಿಳಿಸುವ ಮೂಲಕ ಪ್ರಾರಂಭವಾದ ಪತ್ರ ಕೊನೆಯಲ್ಲಿ ಗೌರವಾನ್ವಿತರಿಗೆ ಧನ್ಯವಾದಗಳು ಅಥವಾ ವಂದನೆಗಳು ಅಂತ ಕೊನೆಗಾಣುತ್ತಿತ್ತು ಆದರೆ ಈಗ ಹಲೋ ಎಲ್ಲಿದ್ದಿಯಾ ಲೇ , ಸರಿ ಪೋನ್ ಮಾಡುಗ್ಲಾ ಎನ್ನುವ ಭಾಷೆ ಬರುತ್ತಿದಿದೆ , ಏನೇ ಇರಲಿ ವ್ಯಯಕ್ತಿಕ ಆದರೆ ಅಂಚೆ ಪತ್ರಗಳು ಈಗೀನ ಜನರಿಗೆ ಬರೆಯುವುದೇ ಗೊತ್ತಿಲ್ಲ , ಅಂಚೆ ಕಚೇರಿ ಈಗ ಸಮಾಜದ ವ್ಯಾವಹಾರಿಕ ಪತ್ರಗಳ ವಿನಿಮಯ ಕಂಪನಿಯಾಗಿದೆ , ಎಲ್ ಐ ಸಿ , ಕೋರ್ಟ್ ಆದೇಶದ ಪತ್ರಗಳು , ಸರ್ಕಾರಿ ಪತ್ರಗಳು ಮಾತ್ರ ಬರುತ್ತಿವೆ ಆದರೆ ಆತ್ಮೀಯತೆಯ ಸಂಬಂಧದ ಪತ್ರಗಳು ಬರುತ್ತಿಲ್ಲ ಕಾರಣ ಡಿಜಿಟಲ್ ಜಗತ್ತು, ಇದರಲ್ಲಿ ನಾನು ಕೂಡ ಒಬ್ಬ ಲೇಖನ ಬರೆತ್ತಿರುವೆ ಅಂತ ನಾನೇನು ಇನ್ನು ಅಂಚೆ ಪತ್ರಗಳು ಬರೆಯುತ್ತಿದ್ದೇನೆ ಅಂತ ಭಾವಿಸಿ ಜಗಳ ಮಾಡಬೇಡಿ , ನನ್ನ ಕೈಯಲ್ಲಿ ಸ್ಮಾರ್ಟ್ ಫೋನ್ ಇದೆ ಆಗಾಗಿ ನಾನು ಹೊಸ ಸಮಾಜಕ್ಕೆ ಹೊಂದಿಕೊಂಡಿರುವೆ , ಅಂಚೆಯ ಡಬ್ಬದಲ್ಲಿ ಈಗ ಇರುವೆ , ಚಿಕ್ಕ ಚಿಕ್ಕ ಕೀಟಗಳು ವಾಸವಾಗಿವೆ, ಮನುಷ್ಯನಿಗೆ ಸಹಾಯ ಮಾಡಲು ಜನ್ಮ ತಾಳಿದ ಅಂಚೆ ಡಬ್ಬ, ಚಿಕ್ಕ ಚಿಕ್ಕ ಜೀವಿಗಳಿಗೆ ಆಸರೆಯಾಗಿದೆ ಗ ಖುಷಿ ವಿಚಾರ .

ನನಗೆ ನಮ್ಮ ಶಾಲೆಯಲ್ಲಿ ಒಂದು ಚರ್ಚಾಸ್ಪರ್ಧೆ ಇಟ್ಟಿದ್ರು , ಅಂಚೆ ಪತ್ರ ಮತ್ತು ಮೊಬೈಲ್ ಪೋನ್ ಗಳಿಂದ ಆಗುವ ಅನುಕೂಲತೆ ಮತ್ತು ಅನಾನುಕೂಲತೆಗಳ ಬಗ್ಗೆ ಸ್ಪರ್ಧೆ ಏರ್ಪಡಿಸಲಾಗಿತ್ತು, ಅಂಚೆ ಪತ್ರ ಮತ್ತು ಮೊಬೈಲ್ ಅನುಕೂಲತೆಯ ಬಗ್ಗೆ ನಮಗೆ ಗೊತ್ತಿದೆ ಹಾಗೆ ಅನಾನುಕೂಲತೆಯ ಬಗ್ಗೆಯು ನಮಗೆ ಗೊತ್ತಿದೆ ಇದರ ಬಗ್ಗೆ ಹೆಚ್ಚಿನ ಹೇಳಿಕೆಯ ಬಗ್ಗೆ ಬೇಡ ಅನಿಸುತ್ತದೆ ಆಗ ನಾನು ಮೊಬೈಲ್ ಪೋನ್ ಅನುಕೂಲತೆ ಮತ್ತು ಅನಾನುಕೂಲಗಳ ಬಗ್ಗೆ ಪ್ರಸ್ತುತ ತಂತ್ರಜ್ಞಾನವನ್ನು ಗಮನದಲ್ಲಿಟ್ಟುಕೊಂಡು ಹೇಳಿದೆ ದ್ವಿತೀಯ ಸ್ಥಾನ ಬಂತು ಇದು ಬೇರೆ ವಿಚಾರ , ವಿಷಯದ ಬಗ್ಗೆ ವ್ಯಕ್ತಪಡಿಸುವ ವಿಚಾರ ಎಷ್ಟು ಅನುಕೂಲ ಮತ್ತು ಅನಾನುಕೂಲ ಅಂತ ನಮಗೆ ತಿಳಿಯಬೇಕು ಅಲ್ವಾ ಅದಕ್ಕೆ ನಾನು ಈ ಚಿಕ್ಕ ವಿಚಾರ ಹೇಳಿದೆ, ಈಗ ಈ ತುಕ್ಕು ಹಿಡಿದ ಅಂಚೆ ಡಬ್ಬವನ್ನು ಏನು ಮಾಡಬೇಕು ನಾವು ಮತ್ತು ನಮ್ಮ ಸರ್ಕಾರ , ಅಂಚೆ ಪತ್ರಗಳ ಅವಶ್ಯಕತೆ ಈಗ ಇಲ್ಲ , ಕಂಪ್ಯೂಟರ್ ಬಂದಿದೆ , ಇಮೇಲ್, ಜೀ ಮೇಲ್ , ವಾಟ್ಸ್ ಆ?ಯಪ್, ಪೇಸ್ ಬುಕ್, ಮತ್ತೆ ನಾವು ಬಳಸುವ ಗ್ರಾಮ್ ಗಳು ತುಂಬಾ ಇವೆ ಇವುಗಳ ಮೂಲಕ ಯಾವುದೇ ವಿಚಾರವಾಗಲಿ ಬೇಗ ತಲುಪುತ್ತದೆ, ಅದು ಸುಳ್ಳು ಆದರೂ ಸರಿ , ಆಗ ಏನಾದರೂ ಆಗಿದೆ ಅಂದರೆ ಎರಡು ಮೂರು ದಿನ ಬೇಕಿತ್ತು ತಿಳಿಯಲು ಈಗ ಒಂದು ಸೆಕೆಂಡ್ ಸಾಕು ಅವನು ಸತ್ತಿರಲ್ಲ ಇನ್ನು ಮರಳಿ ಬಾರದೂರಿಗೆ ನಿನ್ನ ಪಯಣ ಅಂತ ಸಂದೇಶ , ಸೋಶಿಯಲ್ ಮೀಡಿಯಾ ಎಂದರೆ "ಒಬ್ಬರಿಂದ ಇನ್ನೊಬ್ಬರಿಗೆ ಅತಿ ಬೇಗನೆ ಸಮಯದಲ್ಲಿ ತಲುಪುವ ತಂತ್ರಜ್ಞಾನದ ಪಕ್ಕದ ಮನೆಗಳು" ಅಂತ ಹೇಳಬಹುದು. ಆಧುನೀಕರಣದ ತಂತ್ರಜ್ಞಾನ ಭೂಮಿಯ ಸರ್ವನಾಶಕ್ಕೆ ಕಾರಣವಾಗುತ್ತಿದೆ , ಅಂಚೆಯ ಡಬ್ಬ ಮತ್ತು ಕೈ ಬರವಣಿಗೆ ಜಗತ್ತಿನ ಮಾಲಿನ್ಯವನ್ನು ಕಾಪಾಡುತ್ತಿತ್ತು , ಒಂಬತ್ತು ತಿಂಗಳು ಹೊಟ್ಟೆಯಲ್ಲಿ ಇದ್ದು ಜನಿಸಿದ ಮಗು ಆರೋಗ್ಯವಾಗಿ ಬೆಳೆಯುತ್ತದೆ ಆದರೆ ಒಂದು ದಿನದಲ್ಲಿ ತಂತ್ರಜ್ಞಾನದ ಮೂಲಕ ಜನಿಸಿದ ಮಗು ಸರ್ವನಾಶಕ್ಕೆ ದಾರಿಯಾಗುತ್ತದೆ ಎಂದು ನನ್ನ ತಿಳುವಳಿಕೆ.

ನನ್ನೂರಿನ ಅಂಚೆ ಡಬ್ಬ ಮತ್ತು ಅಂಚೆ ಡಬ್ಬಕ್ಕೆ ಹಾಕಿದ ಬೀಗ ತುಕ್ಕು ಹಿಡಿದಿದೆ ಮತ್ತು ಈ ಬೀಗದ ಕೈ ಕಾಣೆ ಆಗಿರಬಹುದು ದಯಮಾಡಿ ಏನು ಎರಡು ಮೂರು ಸಾವಿರ ಹೋಗಬಹುದು ನೋಡಲು ಚೆಂದ ಕಾಣುವ ಹಾಗೆ ಆದರೂ ಹಾಕಿ , ಪತ್ರ ಬರೆಯುವುದು ದೂರದ ವಿಚಾರ , ಡಬ್ಬ ಗಳಿಂದ ಪತ್ರಗಳು ಪೋಸ್ಟ್ ಮ್ಯಾನ್ ಕೈಯಲ್ಲಿ ಸಿಗುತ್ತಿಲ್ಲ , ಚೀಲದಲ್ಲಿ ಕಛೇರಿಯಿಂದ ಕಛೇರಿಗೆ ಬರುತ್ತವೆ ಅಷ್ಟೇ , ಮತ್ತೆ ಇನ್ನೊಂದು ವಿಚಾರ ಹಳ್ಳಿಯಲ್ಲಿ ಈಗಾಗಲೇ ಅತಿ ಹೆಚ್ಚು ಮರ ಕಡಿಯುವ ಪ್ರಕ್ರಿಯೆ ಜಾಸ್ತಿಯಾಗಿದೆ ಅದಕ್ಕಾಗಿ ಹಳ್ಳಿಯಲ್ಲಿ ಮರಗಳು ಕಮ್ಮಿ , ಮಳೆಯು ಕಮ್ಮಿ , ಪಟ್ಟಣಗಳಲ್ಲಿ ಮರಗಳು ಜಾಸ್ತಿ ಮಳೆಯು ಜಾಸ್ತಿ , ಆದರೆ ಮಣ್ಣಿಗೆ ಬಿದ್ದ ಬೀಜ ಫಲ ನೀಡುತ್ತದೆ, ಡಾಂಬರು ಮೇಲೆ ಬಿದ್ದ ಬೀಜ ಸಿಡಿದು ಹೋಗುತ್ತದೆ ವಾಹನಗಳಿಗೆ ಸಿಲುಕಿ , ಪಟ್ಟಣದಲ್ಲಿ ಅತಿ ಹೆಚ್ಚಿನ ಮಳೆ ಪ್ರಯೋಜನೆ ಇಲ್ಲ ಆದರೆ ಹಳ್ಳಿಗಳಲ್ಲಿ ರೈತರು ಮರಗಳನ್ನು ಕಡಿದು ಹಣಕ್ಕಾಗಿ ಮಳೆಯನ್ನು ಮಾರಾಟ ಮಾಡುತ್ತಿರುವುದು ಶೋಚನೀಯ ಸ್ಥಿತಿಯಲ್ಲಿ ನಾವು ಇದ್ದೇವೆ ಇದಕ್ಕಾಗಿ ಯಾವುದೇ ಮರ ಗಿಡಗಳಿಗೆ ಮೊಳೆ ಹೊಡೆದು ಜಾಹೀರಾತು ಫಲಕಗಳು , ಬ್ಯಾನರ್ ಕೊಟ್ಟಬೇಡಿ , ಅಂಚೆ ಡಬ್ಬವನ್ನು ಮರಕ್ಕೆ ಮೊಳೆ ಹೊಡೆದು ನೇತಾಡುವ ರೀತಿ ಮಾಡಬೇಡಿ ಮರಗಳಿಗೂ ಕೂಡ ಜೀವವಿದೆ. ಒಂದು ಸಿಮೆಂಟಿನ ಗೋಡೆಗೆ ಅಂಚೆ ಡಬ್ಬವನ್ನು ಹಾಕಿ , ಅಂಚೆ ಪತ್ರಗಳನ್ನು ಮುದ್ರಿಸಲು ನಿಲ್ಲಿಸುವ ಯೋಚನೆಯನ್ನು ಸರ್ಕಾರಕ್ಕೆ ಕೊಡದೆ ಪತ್ರಗಳನ್ನು ಬರೆಯಿರಿ ಭಾಷೆ ಮತ್ತು ಬರವಣಿಗೆ ಅತಿ ಹೆಚ್ಚು ಅಭಿವೃದ್ಧಿಯಾಗುತ್ತದೆ. ಇನ್ನು ಮುಂದೆ ನಾನು ಕೂಡ ತಿಂಗಳಲ್ಲಿ ಪತ್ರಗಳನ್ನು ಬರೆಯಲು ಪ್ರಾರಂಭಿಸುವೆ , ನೀವು ಕೂಡ ಎರಡು ಪಾತ್ರವಾದರೂ ಬರೆಯಿರಿ ನಿಮ್ಮ ಮಕ್ಕಳಿಗೂ ಹೇಳಿ ಬರೆಯಲು ಶೂರು ಮಾಡಿ ಪರೀಕ್ಷೆಯಲ್ಲಿ ಅಂಕವಾದರು ಬರುತ್ತವೆ.ಅಂಚೆ ಡಬ್ಬಕ್ಕೆ ಮರುಜನ್ಮ ನೀಡಿ, ಡಬ್ಬದಿಂದ ತುಕ್ಕನ್ನು ಶಾಶ್ವತವಾಗಿ ದೂರ ಹಿಡಿ, ನಾನು ಮೊದಲೇ ಹೇಳಿರುವೆ ಅಂಚೆ ಕಛೇರಿ ಮತ್ತು ಡಿಜಿಟಲ್ ಅಂಚೆಯ ಬಗ್ಗೆ ಮಾತನಾಡುತ್ತಿಲ್ಲ ಅಂತ ಏಕೆಂದರೆ ಕಾಲ ಕಾಲಕ್ಕೆ ಮನುಷ್ಯನಿಗೆ ತಂತ್ರಜ್ಞಾನ ಅವಶ್ಯಕತೆ ಇದೆ ಏನು ಮಾಡಲು ಸಾಧ್ಯವಿಲ್ಲ.

**ವರದಿ ಭೋವಿ ರಾಮಚಂದ್ರ.**

# ಅ.06 ರಂದು ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಭಾವಿ ತರಬೇತಿ ಆಯ್ಕೆಗಾಗಿ ಸಾಮಾನ್ಯ ಪ್ರವೇಶ ಪರೀಕ್ಷೆ; ಪ್ರವೇಶ ಪತ್ರ ಪಡೆಯಲು ಸೂಚನೆ

● ವಾರ್ತಾಲೋಕ ವಾರ್ತೆ

**ಬಳ್ಳಾರಿ :** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ನೀಡಲಾಗುತ್ತಿರುವ ಐಎಎಸ್ ಮತ್ತು ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವಭಾವಿ ತರಬೇತಿ ಆಯ್ಕೆಗಾಗಿ ಸಾಮಾನ್ಯ ಪ್ರವೇಶ ಪರೀಕ್ಷೆಯು ಅ.06 ರಂದು ನಡೆಯಲಿದ್ದು, ಅರ್ಜಿ ಸಲ್ಲಿಸಿದ ಅರ್ಹ ಅಭ್ಯರ್ಥಿಗಳು ಸೇವಾಸಿಂಧು ಪೋರ್ಟಲ್‌ನಲ್ಲಿ ಪ್ರವೇಶ ಪತ್ರವನ್ನು (ಹಾಲ್‌ಟಿಕೇಟ್) ಡೌನ್‌ಲೋಡ್ ಮಾಡಿಕೊಳ್ಳಬಹುದು.

ಅರ್ಜಿ ಸಲ್ಲಿಸಿದ ಅರ್ಹ ಅಭ್ಯರ್ಥಿಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಹೊಸಪೇಟೆ ರಸ್ತೆಯ ಬಿಐಟಿಎಂ ಕಾಲೇಜು ಬಳಿಯ ಡಾ.ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ ಪರೀಕ್ಷೆ ನಡೆಸಲಾಗುವುದು

ಹೆಚ್ಚಿನ ಮಾಹಿತಿಗಾಗಿ ನಗರದ ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಬಳಿಯ ಮೌಲಾನ ಅಜಾದ ಭವನದಲ್ಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿ ಅಥವಾ ದೂ:08392-200125/224, ಇಲಾಖಾ ಸಹಾಯವಾಣಿ 8277799990 ಗೆ ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ವಿಠೋಬ ಹೊನಕಾಂಡೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಿಲ್ಲಾಮಟ್ಟಕ್ಕೆ ಆಯ್ಕೆಯಾದ ಸೇಂಟ್ ಅನ್ನಿಯಸ್ ಲೈನ್ಸ್ ವಿದ್ಯಾರ್ಥಿಗಳು



**ಬಾಗಲಕೋಟ:** ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ, ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಜರುಗಿದ 2024-25 ನೇ ಸಾಲಿನ ಜಿಲ್ಲಾಮಟ್ಟದ

ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಕ್ರೀಡಾಕೂಟದಲ್ಲಿ ಕು. ಸಾತ್ವಿಕ ಜಿ. ತೆಗ್ಗಿ ಉದ್ದಜಿಗಿತದಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದು, 2024-25 ನೇ ಸಾಲಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ದಸರಾ ಕ್ರೀಡಾಕೂಟದಲ್ಲಿ ಡಿವ್ಹಿಜನಲ್ ಲೇವಲ್ ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಕು.ರಿತಿಕಾ ಮತ್ತು ಕು.ಪ್ರಾಂಜಲ ಪವಾರ ಪ್ರಥಮ ಸ್ಥಾನ ಪಡೆದು ಬೆಳಗಾವಿ ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸೇಂಟ್ ಅನ್ನಿಯಸ್ ಲೈನ್ಸ್ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಸಿಸ್ಟರ್ ಅನ್ಸೆಲ್, ದೈಹಿಕ ಶಿಕ್ಷಣ ನಿರ್ದೇಶಕರುಗಳಾದ ರವಿ ಸಂಗಮ, ಮಂಜುನಾಥ, ವರ್ಗದ ಗುರುಗಳು, ಬೋಧಕ-ಬೋಧಕ ಸಿಬ್ಬಂದಿ, ಆಡಳಿತ ಮಂಡಳಿ ಹಾಗೂ ವಿದ್ಯಾರ್ಥಿಗಳು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ಅಂಗಡಿ ಮುಂಗಟ್ಟುಗಳ ತೆರವು ಕಾರ್ಯಾಚರಣೆ



**ಮುದ್ದೇಬಿಹಾಳ :** ಪಟ್ಟಣದಲ್ಲಿ ಅತಿಯಾದ ಜನದಟ್ಟನೆವಾಗಿ ಅಪಘಾತಗಳು ಹೆಚ್ಚಾಗಿರುದರ ಪರಿಣಾಮ ಅನಧಿಕೃತವಾಗಿ ಡಬ್ಬಾ ಅಂಗಡಿ ಇಟ್ಟುಕೊಂಡು ವ್ಯಾಪಾರ ನಡೆಸುತ್ತಿದ್ದ ವ್ಯಾಪಾರಸ್ಥರಿಗೆ ರವಿವಾರ ಬೆಳ್ಳಂಬೆಳಿಗ್ಗೆ ಪುರಸಭೆ ಆಡಳಿತ ಶಾಕ್ ನೀಡಿದೆ ಬಸವೇಶ್ವರ ವೃತ್ತದ ಬಳಿ ಪುರಸಭೆಯ ಜಾಗೆಯಲ್ಲಿದ್ದ ಅಂಗಡಿ ಮುಂಗಟ್ಟುಗಳ ತೆರವು ಕಾರ್ಯಾಚರಣೆ ನಡೆಸಿ ಸಫಲವಾಯಿತು.

ಈ ಮೊದಲು ಡಬ್ಬಾ ಅಂಗಡಿಗಳನ್ನು ತೆರವುಗೊಳಿಸಿ ಕೊಳ್ಳುವಂತೆ ಪುರಸಭೆಯ ಆಡಳಿತದಿಂದ ಮೂರು ದಿನಗಳ ಕಾಲ ದ್ವನಿವರ್ದಕಗಳಿಂದ ಖಡಕ್ ಸೂಚನೆ ನೀಡಿದ್ದರು. ವ್ಯಾಪಾರಿಗಳು ತಮ್ಮ ಅಂಗಡಿಗಳನ್ನು ತೆರುವುಗೊಳಿಸಿಕೊಳ್ಳುವದಾಗಿ ಕೆಲ ದಿನಗಳ ಅವಕಾಶವನ್ನು ಬೇಡಿದ್ದರುವ ಎನ್ನಲಾಗಿದೆ,ಆದರೆ ಮೂರು ದಿನಗಳ ನಿರಂತರ ವಾಹನದ ಮುಖಾಂತರ ದ್ವನಿ ವರ್ದಕದಿಂದ ತೆರುವು ಕಾರ್ಯಚರಣೆಯ ಮಾಹಿತಿ ನೀಡಿದ್ದರು , ವ್ಯಾಪಾರಿಗಳು ಇದಲ್ಲದಕ್ಕು ಕೀವುಗೊಡದೆ ತಮ್ಮ ಕಾರ್ಯ ಮುಂದುವರೆಸಿದ್ದರು ಆದರೆ ಪುರಸಭೆಯಿಂದ ಮೂರು ದಿನಗಳ ಗಡುವು ನೀಡಿದ್ದರು. ಗಡುವಿನ ಅಂತಿಮ ದಿನದಂದು ಯಾವುದೇ ಅಂಗಡಿಕಾರರು ಸ್ವಯಂ ಪ್ರೇರಿತರಾಗಿ ತಮ್ಮ ಅಂಗಡಿಗಳನ್ನು ತೆರವುಗೊಳಿಸದ ಹಿನ್ನೆಲೆ ಜೆಸಿಬಿಗಳು ಬೆಳ್ಳಂಬೇಳ್ಳಗ್ಗೆ ಪಟ್ಟಣದಲ್ಲಿ ಘರ್ಜನೆಯ ಮುಖಾಂತರ ತೇರುವುಗೊಳಿಸಲಾಯಿತು.

ಕಾರ್ಯಾಚರಣೆ ವೇಳೆ ಉದಯಕಾಲ ಪತ್ರಿಕೆಯೊಂದಿಗೆ ಮಾತನಾಡಿದ ಸ್ಥಳೀಯ ಡಬ್ಬಾ ಅಂಗಡಿಗಳ ವ್ಯಾಪಾರಸ್ಥರು ಡಬ್ಬಾ ಅಂಗಡಿಗಳಿಂದ ಪಟ್ಟಣದಲ್ಲಿ ಜನದಟ್ಟನೆಯಾಗುತ್ತಿಲ್ಲಾ ದ್ವೀಚಕ್ರವಾಹನ ಹಾಗೂ ಅತಿಯಾದ ಭಾರವನ್ನು ಹಾಕಿಕೊಂಡ ಸಂಚರಿಸುವ ಟಿಪ್ಪರಗಳ ಅವೈಜ್ಞಾನಿಕ ಚಲನೆಯಿಂದ ಅಪಘಾತಗಳು ,ಟ್ರಾಫೀಕ್ ಆಗುತ್ತಿದೆ, ಪುರಸಭೆಯವರು ನಮ್ಮ ಮೇಲೆ ಟ್ರಾಫೀಕ್ ರೂಲ್ಸ್ ಹೇಳಿ ತೇರುವುಗೋಳಿಸುತ್ತಿರುವದರಿಂದ ನಮಗೆ ತುಂಭಾ ತೊಂದರೆಯಾಗುತ್ತದೆ ನಮ್ಮ ಸಂಸಾರ ಈ ಅಂಗಡಿಗಳಿಂದ ನಡೆಯುತ್ತಿದೆ,ಈ ಪುರಸಭೆಯ ವರ್ತನೆಯಿಂದ ನಮ್ಮ ಹೊಟ್ಟೆಗೆ ತಣ್ಣಿರು ಬಟ್ಟೆ ಹಾಕಿಕೋಳ್ಳಬೇಕು ಎಂದು ಆರೋಪಿಸಿದರು..

ತೆರವುಗೊಳಿಸಿಕೊಳ್ಳುವಂತೆ ಧ್ವನಿವರ್ದಕದ ಮುಖಾಂತರ ಪ್ರಕಟಣೆ ಹೊರಡಿಸಿದ್ದರು. ಇಷ್ಟಾದರೂ ವ್ಯಾಪಾರಸ್ಥರು ತೆರುವುಗೊಸದ ಹಿನ್ನಲೆಯಲ್ಲಿ ರವಿವಾರ ಬೆಳ್ಳಂಬೆಳಿಗ್ಗೆ 6 'ಗಂಟೆಗೆ ಪುರಸಭೆ ಮುಖ್ಯಾಧಿಕಾರಿ ಮಲ್ಲನಗೌಡ ಬಿರಾದಾರ, ಸಿಪಿಐ ಮಲ್ಲಿಕಾರ್ಜುನ ತುಳಸಿಗೇರಿ, ಪಿಎಸ್‌ಐ ಸಂಜೀವ ತಿಪ್ಪಾರೆಡ್ಡಿ, ಸಿಬ್ಬಂದಿಗಳೊಂದಿಗೆ ರವಿವಾರ ಕಾರ್ಯಾಚರಣೆಗೆ ಇಳಿದು ಎಲ್ಲ ಅಂಗಡಿಗಳನ್ನು ತೆರವುಗೊಳಿಸಿದ್ದಾರೆ.

ಪುರಸಭೆಯಿಂದ ಮುಖ್ಯ ಬಜಾರ್ ತೆರವು ಕಾರ್ಯವಾಗಲಿ

ಪಟ್ಟಣದಲ್ಲಿ ಅಭಿವೃದ್ಧಿ ಹಾಗೂ ಅಪಘಾತಗಳ ನೆಪದಲ್ಲಿ ಬರಿ ಬಡವರ ಡಬ್ಬಾ ಅಂಗಡಿಗಳು ಮಾತ್ರ ತೆರುವುಗೊಳಿಸಬಾರದು, ಪಟ್ಟಣದ ಸಂಪೂರ್ಣವಾಗಿ ಬಸವೇಶ್ವರ ವೃತ್ತದಿಂದ ಕನ್ನಡ ಶಾಲೆಯ ಮುಖಾಂತರ ಗ್ರಾಮದೇವತೆಯ ಪಾದಗಟ್ಟಿ ಹಾಗೂ ಇಂದಿರಾ ವೃತ್ತದವರೆಗೂ ಮುಖ್ಯ ಬಜಾರನಲ್ಲಿಯೂ ಮಾಸ್ಟರ್ ಪ್ಲಾನ್ ನಂತೆ ತೆರುವು ಮಾಡಿ ತಮ್ಮ ಗಟ್ಟಿತನ ಪ್ರದರ್ಶನ ಮಾಡಲಿ ಅದು ಬಿಟ್ಟು ಶ್ರೀಮಂತರ ಅಂಗಡಿಗಳು ಇದ್ದಾವೆ ಎಂದು ಸುಮ್ಮನೆ ಬಿಟ್ಟರೆ ನಾವು ಎಲ್ಲಾ ಡಬ್ಬಾ ಅಂಗಡಿಗಳ ಮಾಲಿಕರು ಕೂಡಿಕೊಂಡು ಪುರಸಭೆ ಎದುರು ಪ್ರತಿಭಟನೆ ಹಮ್ಮಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

# ಭಗತ್‌ಸಿಂಗ್‌ರ ದೇಶಪ್ರೇಮ ಯುವಕರಿಗೆ ಪ್ರೇರಣೆ: ನ್ಯಾಯವಾದಿ ಮಲ್ಲಿಕಾರ್ಜುನ ಭೃಂಗಿಮಠ



**ವಿಜಯಪುರ :** ರಕ್ತದ ಕಣಕಣಗಳಲ್ಲಿಯೂ ರಾಷ್ಟ್ರ ಪ್ರೇಮವನ್ನು ತುಂಬಿಕೊಂಡು ದೇಶದ ಸ್ವಾತಂತ್ರ್ಯಕ್ಕಾಗಿ ತನ್ನ ಪ್ರಾಣವನ್ನೇ ಮುಡುಪಾಗಿಟ್ಟ ಅಪ್ರತಿಮ ಹೋರಾಟಗಾರ, ಕ್ರಾಂತಿಯ ಕಿಡಿ ಭಗತ್‌ಸಿಂಗ್‌ರ ದೇಶ ಪ್ರೇಮ ಯುವಕರಿಗೆ ಪ್ರೇರಣೆ ಎಂದು ನ್ಯಾಯವಾದಿ ಸಾಹಿತಿ ಮಲ್ಲಿಕಾರ್ಜುನ ಭೃಂಗಿಮಠ ಹೇಳಿದರು ನಗರದ ಸಿದ್ದೇಶ್ವರ ದೇವಾಲಯದ ಆವರಣದಲ್ಲಿ ಭಾನುವಾರ ಸ್ವಾಮಿ ವಿವೇಕಾನಂದ ಯುವ ಬ್ರಿಗೇಡ್ ಮತ್ತು ಭಾರತ ವೇದಿಕೆ ಚಾರಿಟೇಬಲ್ ಫೌಂಡೇಶನ್ ಸಹಯೋಗದಲ್ಲಿ ಹಮ್ಮಿಕೊಂಡ ದೇಶಪ್ರೇಮಿ ಭಗತ್‌ಸಿಂಗರ ಜಯಂತ್ಯುತ್ಸವದ ಕಾರ್ಯಕ್ರಮದಲ್ಲಿ ಭಗತ್ ಸಿಂಗ್‌ರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು

ಮುಖ್ಯ ಅತಿಥಿ ಸಾಹಿತಿ ಪ್ರೊ, ಎ.ಎಚ್. ಕೊಳಮಲಿ ಸ್ವಾತಂತ್ರ ಹೋರಾಟಗಾರ ಭಗತ್ ಸಿಂಗನ ಕುರಿತು ವಿಶೇಷ ಉಪನ್ಯಾಸವನ್ನು ನೀಡಿ, ದೇಶಕ್ಕೆ ಸ್ವಾತಂತ್ರ್ಯವನ್ನು ತಂದು ಕೊಡುವುದೇ ಭಗತ್‌ಸಿಂಗರ ಗುರಿ ಮತ್ತು ಛಲವಾಗಿತ್ತು. ಬಾಲ್ಯದಿಂದಲೂ ದೇಶಪ್ರೇಮವನ್ನು ಒಳಗೊಂಡಿದ್ದನು. ದುಷ್ಟ ಬ್ರಿಟಿಷರನ್ನು ಹೊಡೆದು ಓಡಿಸುವುದೇ ನನ್ನ ಬಲವಾದ ಛಲ ಎಂದು ಹೋರಾಡಿ ಕೇವಲ 24 ವರ್ಷದಲ್ಲಿ ದೇಶಕ್ಕಾಗಿ ಪ್ರಾಣವನ್ನು ತ್ಯಾಗ ಮಾಡಿದ ಅಪ್ಪಟ ದೇಶಪ್ರೇಮಿ ಭಗತ್‌ಸಿಂಗರ ದೇಶ ಅಭಿಮಾನ ಮೆಚ್ಚುವಂತದ್ದು. ಇಂದಿನ ಯುವಕರು ದೇಶಕ್ಕಾಗಿ ದುಡಿಯಬೇಕು. ದೇಶಕ್ಕಾಗಿ ಮಡಿಯಬೇಕು.

ತಾಯಿ ಹಾಗೂ ತಾಯಿ ನಾಡಿಗಾಗಿ ಹೋರಾಡುವ ಯುವ ಪಡೆಯ ಅವಶ್ಯಕತೆ ಇದೆ ಎಂದು ಹೇಳಿದರು ಫೌಂಡೇಶನದ ಅಧ್ಯಕ್ಷ ಸುನೀಲ ಜೈನಾಪುರ ಪ್ರಾಸ್ತಾವಿಕವಾಗಿ ಮಾತನಾಡಿ, ದೇಶದ ಭವಿಷ್ಯ ಯುವಕರ ಕೈಯಲ್ಲಿದೆ. ದೇಶ ಕಟ್ಟುವಲ್ಲಿ ಯುವಕರು ಕಂಕಣ ಬದ್ಧರಾಗಿ ನಿಲ್ಲಬೇಕು. ಇಂದಿನ ಯುವಕರಲ್ಲಿ ಭಗತ್‌ಸಿಂಗರ ದೇಶಾಭಿಮಾನ ಬೆಳೆಯಬೇಕೆಂದರು

ಗುರು ಗಚ್ಚಿನಮಠ, ಸಂಗಮೇಶ ಜಾಧವ, ಶಂಕರ ಹಾಲಳ್ಳಿ, ಸಂತೋಷ ಹೆಗಡೆ, ಅಮಿತ ನಾಯ್ಕೋಡಿ, ಸಂಜು ಹೂಗಾರ, ಕಿರಣ ಕೆಂಗನಗುತ್ತಿ, ಅವಿನಾಶ ಮೆಹಿದ್ರಕರ್, ವಿಜಯ ಮುರಗಾನೂರ, ಸುಧೀರ, ಪ್ರಸಾದ್ ಪಾಟೀಲ, ಪ್ರೇಮ ನಿಡೋಣಿ, ಯೋಗೇಶ ಹೊನಕೇರಿ ಮುಂತಾದವರು ಉಪಸ್ಥಿತರಿದ್ದರು,

# ಬೆಳಗಾವಿ ಪಾಲಿಕೆ ಸೂಪರ್‌ಸೀಡ್‌ಗೆ ಆಗ್ರಹಿಸಿ ವಿವಿಧ ಸಂಘಟನೆಗಳ ಧರಣಿ



**ಬೆಳಗಾವಿ:** ಭ್ರಷ್ಟಾಚಾರದಲ್ಲಿ ಮುಳುಗಿದಬೆಳಗಾವಿಮಹಾನಗರ ಪಾಲಿಕೆ ಸೂಪರ್‌ಸೀಡ್ ಮಾಡಬೇಕು ಎಂದು ಆಗ್ರಹಿಸಿ ನಗರದಲ್ಲಿ ವಿವಿಧ ಸಂಘಟನೆಗಳ ಮುಖಂಡರು ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು.

ಎಂಇಎಸ್, ಶ್ರೀರಾಮ ಸೇನೆ ಹಿಂದೂಸ್ಥಾನ್ ಸಂಘಟನೆಗಳ ನೇತೃತ್ವದಲ್ಲಿ ರೈತರು ಮತ್ತು ಸಾಮಾಜಿಕ ಕಾರ್ಯಕರ್ತರು, ಸರ್ಕಾರಿ ಸರದಾರ್ಸ್ ಪ್ರೌಢಶಾಲೆ ಮೈದಾನದಿಂದ ರಾಣಿ ಚನ್ನಮ್ಮನ ವೃತ್ತದಿಂದ ಜಿಲ್ಲಾಧಿಕಾರಿ ಕಚೇ–ರಿಯವರೆಗೆ ಮೆರವಣಿಗೆ ನಡೆಸಿದರು. 'ಭ್ರಷ್ಟಾಚಾರ ನಿಲ್ಲಿಸಿ. ಪಾಲಿಕೆ ಉಳಿಸಿ' ಎಂದು ಘೋಷಣೆ ಕೂಗಿದರು.

'ಪಾಲಿಕೆಯಲ್ಲಿ ವ್ಯಾಪಕ ಭ್ರಷ್ಟಾಚಾರಕ್ಕೆ ಕಾರಣವಾದ ಶಾಸಕ ಅಭಯ ಪಾಟೀಲ ಹಾಗೂ ಇತರರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕು' ಎಂದು ಒತ್ತಾಯಿಸಿದರು. ಜಿಲ್ಲಾಡಳಿತಕ್ಕೆ ಮನವಿ ಕೂಡ ಸಲ್ಲಿಸಿದರು.

ಮುಖಂಡ ರಮಾಕಾಂತ ಕೊಂಡೂಸ್ಕರ್ ಮಾತನಾಡಿ, 'ಪಾಲಿಕೆಯಲ್ಲಿ ಅಕ್ರಮವಾಗಿ ವಿವಿಧ ಕಾಮಗಾರಿ ನಡೆಯುತ್ತಿವೆ. ಜನಪ್ರತಿನಿಧಿಗಳ ಒತ್ತಡದಲ್ಲಿ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ತಮ್ಮ ಸ್ವಾರ್ಥಕ್ಕಾಗಿ ರಸ್ತೆ ನಿರ್ಮಿಸಿ, ಪಾಲಿಕೆ ಮೂಲಕ ಭೂಮಾಲೀಕ–ರಿಗೆ ಹೆಚ್ಚಿನ ಪರಿಹಾರ ಕೊಡಿಸಲು ಯತ್ನಿಸಲಾಗುತ್ತಿದೆ. ಅಭಯ ಪಾಟೀಲ ಸೇರಿ ಹಲವರು ಭ್ರಷ್ಟಾಚಾರದಲ್ಲಿ ಭಾಗಿಯಾಗಿದ್ದಾರೆ' ಎಂದು ಆರೋಪಿಸಿದರು.

'ಎಸ್‌ಪಿಎಂ ರಸ್ತೆಯಿಂದ ಹಳೇ ಪಿ.ಬಿ ರಸ್ತೆಯವರೆಗಿನ ಕಾಮಗಾ–ರಿಯಲ್ಲಿ ಆಗಿರುವ ನಷ್ಟವನ್ನು ವಾಸ್ತವವಾಗಿ ತಪ್ಪು ಮಾಡಿದವ–ರಿಂದಲೇ ಭರಿಸಿಕೊಳ್ಳಬೇಕು' ಎಂದು ಒತ್ತಾಯಿಸಿದರು.

'ಸ್ಮಾರ್ಟ್‌ಸಿಟಿ ಯೋಜನೆಯಡಿ ಕೈಗೊಳ್ಳುತ್ತಿರುವಕೆಲವುಕಾಮಗಾರಿ ಅರ್ಧಕ್ಕೆ ನಿಂತಿವೆ. ಅವುಗಳನ್ನು ಪೂರ್ಣಗೊಳಿಸಿ, ಜನರಿಗೆ ಅನುಕೂಲ ಕಲ್ಪಿಸಿಕೊಡಬೇಕು' ಎಂದು ಆಗ್ರಹಿಸಿದರು.

ಮುಖಂಡರಾದ ನೇತಾಜಿ ಜಾಧವ, ಮಹಾದೇವ ಪಾಟೀಲ, ಅನಿಲ ಪಾಟೀಲ ಇತರರಿದ್ದರು.

# ರಾಜ್ಯ ಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆ: ಪದವಿ, ಸ್ನಾತಕೋತ್ತರ ವಿಭಾಗದಲ್ಲಿ ತೃತೀಯ ಸ್ಥಾನ ಪಡೆದ ವಿಜಯಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಸೀಮಾ ಚಪ್ಪರಬಂದ



**ವಿಜಯಪುರ :** ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 155ನೇ ಜಯಂತಿ ಅಂಗವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಪ್ರೌಢಶಾಲೆ, ಪದವಿಪೂರ್ವ ಹಾಗೂ ಪದವಿ, ಸ್ನಾತಕೋತ್ತರ ಪದವಿ ವಿಭಾಗಗಳಿಗೆ ಪ್ರತ್ಯೇಕವಾಗಿ ಆಯೋಜಿಸಿದ್ದ ರಾಜ್ಯ ಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆಯ ಫಲಿತಾಂಶ ಪ್ರಕಟವಾಗಿದೆ.

ಪದವಿ, ಸ್ನಾತಕೋತ್ತರ ವಿಭಾಗದಲ್ಲಿ ವಿಜಯಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಸೀಮಾ ಚಪ್ಪರಬಂದ ಅವರು ತೃತೀಯ ಸ್ಥಾನ ಪಡೆದಿದ್ದಾರೆ. ಜಿಲ್ಲಾ ಮಟ್ಟದಲ್ಲಿ ನಡೆದ ಪ್ರಬಂಧ ಸ್ಪರ್ಧೆಯಲ್ಲಿ ಅವರು ಪ್ರಥಮ ಸ್ಥಾನ ಪಡೆದಿದ್ದರು.

ಗಾಂಧೀಜಿಯವರ ತತ್ವಗಳಿಂದ ದೇಶ ಕಟ್ಟುವ ಬಗೆ, ಗಾಂಧೀಜಿ ವಿಚಾರದಲ್ಲಿ ಸತ್ಯಾಗ್ರಹ, ಅಸ್ಪೃಶ್ಯತೆ ನಿವಾರಣೆಗೆ ಗಾಂಧೀಜಿಯವರ ಪ್ರಯೋಗಗಳು, ಗಾಂಧೀಜಿ ಹಾಗೂ ಪ್ರಜಾಪ್ರಭುತ್ವ, ಸ್ವರಾಜ್ ಆರ್ಥಿಕ ಚಿಂತನೆಗಳು, ಸತ್ಯದ ಪರಿಕಲ್ಪನೆ ಮತ್ತಿತರ ವಿಷಯಗಳ ಕುರಿತು ಪ್ರಬಂಧ ಸ್ಪರ್ಧೆ ನಡೆದಿತ್ತು. ರಾಜ್ಯದಾದ್ಯಂತ ಪ್ರೌಢಶಾಲೆ ವಿಭಾಗದಲ್ಲಿ 1,24,392 ವಿದ್ಯಾರ್ಥಿಗಳು, ಪಿಯುಸಿ ವಿಭಾಗದಲ್ಲಿ 12,840 ವಿದ್ಯಾರ್ಥಿಗಳು, ಕಾಲೇಜು ಹಾಗೂ ಸ್ನಾತಕೋತ್ತರ ವಿಭಾಗದಲ್ಲಿ 17,062 ವಿದ್ಯಾರ್ಥಿಗಳು ಸೇರಿ ಒಟ್ಟು 1,54,294 ವಿದ್ಯಾರ್ಥಿಗಳು ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ರಾಜ್ಯ ಮಟ್ಟದಲ್ಲಿ ಪ್ರಥಮ , ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಕ್ರಮವಾಗಿ 31,000 ರೂ., 21,000 ರೂ ಹಾಗೂ 11,000 ರೂ.ನಗದು ಪುರಸ್ಕಾರ ಹಾಗೂ ಪ್ರಮಾಣ ಪತ್ರಗಳನ್ನು ಅಕ್ಟೋಬರ್ 2 ರಂದು ಸಂಜೆ 4.30ಕ್ಕೆ ಬೆಂಗಳೂರಿನ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕೇಂದ್ರ ಕಚೇರಿಯ ಸುಲೋಚನ ಸಭಾಂಗಣದಲ್ಲಿ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಬಹುಮಾನ ವಿತರಣೆ ಮಾಡಲಿದ್ದಾರೆ ಎಂದು ಇಲಾಖೆಯ ಆಯುಕ್ತ ಹೇಮಂತ ನಿಂಬಾಳ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಯಲಾಟ ಗಂಡುಕಲೆ

**ಧಾರವಾಡ ;** ಬಯಲಾಟಜನಪದ ಕಲೆಗಳಲ್ಲೇ ಗಂಡು ಕಲೆ. ಇದು ನಮ್ಮಗ್ರಾಮೀಣ ಭಾರತದ ಜೀವಾಳ ಎಂದುಕರ್ನಾಟಕ ಬಯಲಾಟ–ಅಕಾಡಮಿಅಧ್ಯಕ್ಷರಾದಡಾ. ಕೆ ಆರ್‌ದುರ್ಗಾದಾಸ್ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ಎಂ.ಟಿ, ಎ.ಟಿ, ಬಿ.ಟಿ ಮತ್ತುಎಚ್.ಟಿ.ಸಾಸನೂರ ಸಹೋದರರ ಸಂಸ್ಮರಣದತ್ತಿ ಅಂಗವಾಗಿ ಆಯೋಜಿಸಿದ್ದ ವಿಶೇಷ ವ್ಯಾಖ್ಯಾನ ಮಾಲೆ 26 ಕಾರ್ಯಕ್ರಮದಲ್ಲಿ ಬಯಲಾಟಗಳು ಹಾಗೂ ಕನ್ನಡ ಭಾಷೆ' ವಿಷಯಗಳ ಕುರಿತು ಅವರು ಮಾತನಾಡುತ್ತಿದ್ದರು. ಮುಂದುವರೆದು, ಬಯಲಾಟಗ್ರಾಮೀಣಅನಕ್ಷರಸ್ಥರ ಮಧ್ಯ ಸೃಷ್ಟಿಯಾದಜನಪದ ಕಲೆ. ರೈತಾಪಿ ಜನರು ಸುಗ್ಗಿಯ ನಂತರ ವಿರಾಮದ ವೇಳೆಯಲ್ಲಿ, ಜಾತ್ರೆ ಹಾಗೂ ಹಬ್ಬಗಳಲ್ಲಿ ಮನರಂಜನೆಗಾಗಿಆ–ಡುವಕಲೆಯಾಗಿದೆ. ಬಯಲಾಟಯಾವುದೇಜಾತಿಗೆ ಸೀಮಿತವಾಗಿಲ್ಲೆ?ಯ ಎಲ್ಲಜಾತಿ, ಧರ್ಮದವರನ್ನು ಒಳಗೊಂಡು ಈ ಬಯಲಾಟಆ–ಡುವರು. ಉತ್ತರಕರ್ನಾಟಕದ ಬಹಳಷ್ಟು ಕಲಾವಿದರು ಬಯಲಾಟದ ಮೂಲಕವೇ ತಮ್ಮಕಲಾಪ್ರೌಢಿಮೆಯನ್ನು ಹೆಚ್ಚಿಸಿಕೊಂಡಿದ್ದಾರೆ. ಬಯಲಾಟದಲ್ಲಿ ಪೌರಾಣಿಕ ಸನ್ನಿವೇಶಗಳೆ ಕಥ–ಾವಸ್ತುಗಳು. ರಾಮಾಯಣ, ಮಹಾಭಾರತದ–ಆಯ್ದ ಪ್ರಸಂಗಗಳನ್ನು ಅನಕ್ಷರಸ್ಥಕಲಾವಿದರು ಪುಟಗಟ್ಟಲೇಕಂಠಪಾಠದ ಮೂಲಕ ಸಂಸ್ಕೃತ ಶ್ಲೋಕವನ್ನೂತಮ್ಮ ಸಿರಿಕಂಠದಿಂದ ಅಭಿವ್ಯಕ್ತಗೊಳಿಸುತ್ತಾರೆ. ಬಯಲಾಟಕ್ಕೆ ಸಂಗೀತ, ಹಾಡು, ನೃತ್ಯಗಳೇ ಜೀವಾಳ. ಕಲಾವಿದರ ಸೃಜಶೀಲತೆ ಅಗಾಧವಾದದ್ದು.ಈ ಆಟವುಅಹೋರಾತ್ರಿಆ–ಡುವಒಂದುಜನಪದಕಲೆಯಾಗಿದೆ.

ಕರಾವಳಿ ಭಾಗದಲ್ಲಿಯಕ್ಷಗಾನವುತನ್ನದೇಆದ ವೈಶಿಷ್ಟ್ಯವನ್ನು ಹೊಂದಿದ್ದರೆ, ಉತ್ತರಕರ್ನಾಟಕದಲ್ಲಿ ಬಹುಪಾಲು ಜಿಲ್ಲೆಗಳಲ್ಲಿ ಬಯಲಾಟಗಳು ಪ್ರದರ್ಶನಗೊಳ್ಳುತ್ತವೆ. ಈ ಬಯಲಾಟಗಳು ಗ್ರಾಮೀಣಜನರ ನೈತಿಕತೆಯನ್ನು ಹೆಚ್ಚಿಸುವಲ್ಲಿ ಮತ್ತು ಸನ್ಮಾರ್ಗದಲ್ಲಿ ನಡೆಯಲು ಪ್ರೇರೆಪಿಸುತ್ತವೆ. ಬಂಯಲಾಟಅಕಾಡೆಮಿಕಲಾವಿದರನ್ನು ಹಾಗೂ ಕಲೆಯನ್ನು ಉಳಿಸಿ ಬೆಳೆಸಲು ಕಾರ್ಯಪ್ರವೃತ್ತವಾಗುತ್ತಿದೆ.

ಯುವಕಲಾವಿದರುಇದರ ಸದುಪಯೋಗ ಮಾಡಿಕೊಳ್ಳಬೇಕೆಂದು ತಿಳಿಸಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಗದಗದಜಾನಪದ ವಿದ್ವಾಂಸಡಾ.ಸಿದ್ದಣ್ಣ ಜಕಬಾಳ ಮಾತನಾಡಿ, ನಮ್ಮಲ್ಲಿ ಶಿಷ್ಟ ಸಾಹಿತ್ಯಕ್ಕಿಂತ ಮೌಖಿಕ ಸಾಹಿತ್ಯವೇ ವಿಫುಲವಾಗಿ ಬೆಳೆದು ಬಂದಿದೆ. ವಿಶೇಷವಾಗಿ ಗ್ರಾಮೀಣ–ಜನಪದರಿಂದರಚನೆಂಯಾದವಾರ್ಣ'ಗಳು ದೇಶಿ ಕಾವ್ಯದ ಮಾರ್ಗಗಳಾಗಿವೆ. ಜನಪದರಂಗಭೂಮಿಕರ್ನಾಟಕದಲ್ಲಿ ಸಮೃದ್ಧವಾಗಿ ಬೆಳೆದು ಬಂದಒಂದು ವೈವಿಧ್ಯಮಯಕಲೆಯಾಗಿದೆ. ಬಯಲಾಟದಲ್ಲಿ ಲಯವೇ ಪ್ರಧಾನವಾದ ಅಂಶ ಎಂದು ಹೇಳಿ ಜನಪದ ಕಲೆಗಳ ಆಯ್ದ ಪ್ರಸಂಗಗಳ ಹಾಡುಗಳನ್ನು ಮನೋಜ್ಞವಾಗಿ ಹಾಡಿ ಪ್ರೇಕ್ಷಕರನ್ನು ರಂಜಿಸಿದರು.

ಕ.ವಿ.ವ. ಸಂಘದ ಪರವಾಗಿಕರ್ನಾಟಕ ಬಂಯಲಾಟಅಕಾಡೆಮಿಂಯಅಧ್ಯಕ್ಷರಾಗಿ ನೂತನವಾಗಿ ನೇಮಕಗೊಂಡಡಾ.ಕೆ.ಆರ್.ದುಗಾರ್ದಾಸ್‌ಅವರನ್ನುಆತ್ಮೀಯತೆಯಿಂದ ಸನ್ಮಾನಿಸಿ, ಗೌರವಿಸಲಾಯಿತು.ದತ್ತಿದಾನಿಗಳ ಪರವಾಗಿಕೆ. ಎಚ್. ಕಾಕನೂರದತ್ತಿಆಶಯ ಮತ್ತು ಸಾಸನೂರ ಸಹೋದರರಕುರಿತು ಮಾತನಾಡಿದರು.

ಸತೀಶತುರಮರಿ ಸ್ವಾಗತಿಸಿದರು.ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಶ್ವೇಶ್ವರಿ ಬ.ಹಿರೇಮಠ ನಿರೂಪಿಸಿದರು.ವೀರಣ್ಣಒಡ್ಡೀನ ವಂದಿಸಿದರು.

# ಪ್ರತಿಯೊಬ್ಬರೂ ಪ್ರೀತಿ,ವಿಶ್ವಾಸ,ಸಹಬಾಳ್ವೆಯಿಂದ ಜೀವನ ಸಾಗಿಸಬೇಕು : ಯು.ಟಿ.ಖಾದರ್




**ಬಸವನಬಾಗೇವಾಡಿ :** ದೇಶದ ಸಂವಿಧಾನವು ಎಲ್ಲ ಸಮಸ್ಯೆಗಳಿಗೆ, ಜನರ ನೋವುಗಳಿಗೆ ಸರಿಪಡಿಸುವ ಶಕ್ತಿಯಿದೆ. ದೇಶದ ಸಂವಿಧಾನವನ್ನು ಸಂರಕ್ಷಣೆ ಮಾಡುವ ಜವಾಬ್ದಾರಿ ಎಲ್ಲರದಾಗಿದೆ. ಪ್ರತಿಯೊಬ್ಬರೂ ಕಾನೂನುಗಳನ್ನು ಪಾಲಿಸುವ ಮೂಲಕ ದೇಶದಲ್ಲಿ ಎಲ್ಲರೂ ಪ್ರೀತಿ, ವಿಶ್ವಾಸ,ಸಹಬಾಳ್ವೆಯೊಂದಿಗೆ ಜೀವನ ಮಾಡಿದರೆ ಸಮಾಜದ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು.

ಪಟ್ಟಣದ ಬಸವ ಭವನದಲ್ಲಿ ತಾಜ್ ಸೋಸಿಯಲ್ ಗ್ರುಫ್ ಶನಿವಾರ ಸಂಜೆ ಹಮ್ಮಿಕೊಂಡಿದ್ದ ಸೌಹಾರ್ದ ಸಮಾವೇಶದಲ್ಲಿ ಮಾತನಾಡಿದ ಅವರು, ದೇಶದಲ್ಲಿ ವಾಸಿಸುವ ಎಲ್ಲ ಜನರು ಸಹೋದರತೆ, ಸಹಬಾಳ್ವೆ, ಮಾನವೀಯತೆ ಮೌಲ್ಯ ಗುಣಗಳನ್ನು ಅಳವಡಿಸಿಕೊಂಡು ಜೀವನ ಮಾಡುವಂತಾಗಬೇಕು. ಸೌಹಾರ್ದ ಸಮಾವೇಶಗಳಿಂದ ಇಂತಹ ಗುಣಗಳನ್ನು ಮೈಗೂಡಿಸಿಕೊಂಡರೆ ಸಮಾವೇಶ ಮಾಡಿದ್ದು ಸಾರ್ಥಕವಾಗುತ್ತದೆ. ಸಮಾಜ–ಕ್ಕೆ ಯಾವುದೇ ಕಂಟಕವಾಗದ ರೀತಿಯಲ್ಲಿ ಜೀವನ ಮಾಡಬೇಕು. ಸಮಾಜ–ಕ್ಕೆ ಪೂರಕವಾದ ಜೀವನ ಮಾಡಿದರೆ ಸಮಾಜದಲ್ಲಿ ಯಾವುದೇ ಕಂಟಕಗಳು ಬಾರದೇ ಎಲ್ಲರೂ ಸೌಹಾರ್ದತೆಯಿಂದ ಇರಲು ಸಾಧ್ಯವಿದೆ ಎಂದರು.

ನಾವೆಲ್ಲರೂಒಗ್ಗೂಟ್ಟಿದ್ದರೆದೇಶಉಳಿಯಲು ಸಾಧ್ಯ. ಎಲ್ಲರೂ ಕಾನೂನು ಪಾಲಿಸುವದು ಬಹುಮುಖ್ಯವಾಗಿದೆ. ಪರಸ್ಪರ ಅರ್ಥ ಮಾಡಿಕೊಂಡು ಸಾಗಬೇಕು. ಸುಂದರ ಸಮಾಜಕ್ಕೆ ನಮ್ಮಲ್ಲಿರುವ ತಪ್ಪುಗಳನ್ನು ಸರಿಪಡಿಸಿಕೊಳ್ಳುವದು ತುಂಬಾ ಅಗತ್ಯವಿದೆ. ನಾವೆಲ್ಲರೂ ಒಂದೇ ತಾಯಿ ಮಕ್ಕಳಿದ್ದಂತೆ. ಎಲ್ಲರೂ ಸೇರಿ ದೇಶವನ್ನು ಇನ್ನಷ್ಟು ಬಲಿಷ್ಠ ಮಾಡೋಣವೆಂದರು.

ಕೆಪಿಸಿಸಿ ವಕ್ತಾರ ನಿಕಿತರಾಜ ಮೌರ್ಯ ಮಾತನಾಡಿ, ಧರ್ಮದ ಹೆಸರಿನಲ್ಲಿ ಸಮಾಜ ಒಡೆಯುವ ಕಾರ್ಯ ನಡೆಯಬಾರದು. ದ್ವೇಷದಿಂದ ದ್ವೇಷ ಮಾಡಿದರೆ ಎಂದಿಗೂ ಸಮಸ್ಯೆ ಪರಿಹಾರ ಕಾಣುವುದಿಲ್ಲ. ಪ್ರೀತಿ,ವಿಶ್ವಾಸ ಬಹು ಮುಖ್ಯವಾಗಿದೆ ಎಂದರು.


ಕರ್ನಾಟಕ ಯುನಿಪ ಅಧ್ಯಕ್ಷ ರಫೀಕ್ ಕುದ್ರೋಳಿ ಮಾತನಾಡಿ, ಧರ್ಮದ ಹೆಸರಿನಲ್ಲಿ ದೇಶವನ್ನು ಒಡೆಯುವದು ತುಂಬಾ ಖಂಡನೀಯ. ಅಧರ್ಮಿಯರನ್ನು ಸೋಲಿಸಲು ಧರ್ಮಿಯರು ನಿರಂತರವಾಗಿ ಹೋರಾಟ ಮಾಡಿರುವದನ್ನು ಎಲ್ಲ ಧರ್ಮದ ಗ್ರಂಥ–'ಗಳಿಂದ ತಿಳಿದುಕೊಳ್ಳುತ್ತೇವೆ. ಜಿಹಾದ್ ಎಂಬುವದು ಪವಿತ್ರ ಪದವಾಗಿದೆ. ಇದು ಕುರಾನ್ದಲ್ಲಿ ಇಲ್ಲವೇ ಇಲ್ಲ. ಇದರ ಬಗ್ಗೆ ಕೆಲವರು ವಿನಾಕಾರಣ ಗೊಂದಲ ಸೃಷ್ಟಿಸಿ ಸಮಾಜದಲ್ಲಿ ಕಂದಕ ಮೂಡಿಸುತ್ತಿರುವುದು ವಿಷಾದನೀಯ ಎಂದರು.

ಸಾನಿಧ್ಯ ವಹಿಸಿದ್ದ ಹಿರೇಮಠದ ಶಿವಪ್ರಕಾಶ ಶಿವಾಚಾರ್ಯ ಮಾತನಾಡಿ,ಮಾತುಗಳು ಭಾಷಣವಾಗದೇ ಅದು ಸಾಧನೆಯಾಗಬೇಕು. ಕೆಲವರ ಮಾತಿನಿಂದ ಸಮಾಜದಲ್ಲಿ ಅಹಿತಕರ ಘಟನೆಗಳು ಸಂಭವಿಸುತ್ತವೆ. ಒಳ್ಳೆಯ ಸಂದೇಶಗಳನ್ನು ಅರಿತುಕೊಂಡು ಜೀವನ ಮಾಡಿದರೆ ಬದುಕಿಗೆ ಒಂದು ಅರ್ಥ ಬರಲು ಸಾಧ್ಯ ಎಂದರು.

ನಂದಿ ಸಕ್ಕರೆ ಕಾರ್ಖಾನೆಯ ನಿರ್ದೇಶಕ ಸತ್ಯಜೀತ ಪಾಟೀಲ, ಸಾನಿಧ್ಯ ವಹಿಸಿದ್ದ ಶಿರೂರಿನ ಡಾ.ಬಸವಲಿಂಗ ಸ್ವಾಮೀಜಿ ಮಾತನಾಡಿದರು.

ವೇದಿಕೆಯಲ್ಲಿ ಹಾಫೀಜ ಮಹ್ಮದಅಲಿ ಮಿಲಿ, ಐ.ಸಿ.ಪಟ್ಟಣಶೆಟ್ಟಿ, ಸುರೇಶ ಹಾ–ರಿವಾಳ, ಚಂದ್ರಶೇಖರಗೌಡ ಪಾಟೀಲ, ಎಂ.ಕೆ.ಬಿರಾದಾರ, ಮುಕ್ತಿಅಬ್ದುಲ ಅಜೀಜ್ ಇತರರು ಇದ್ದರು. ಫಯಾಜ್ ಅವಟಿ ಸ್ವಾಗತಿಸಿದರು. ನಜೀರ ದಡ್ಡಿ ನಿರೂಪಿಸಿದರು. ರೆಹಾನ್ ಕೆರೂರ ವಂದಿಸಿದರು.

# ಹಿರಿಯರ ಸ್ಮರಣೆ ದತ್ತಿ ಗೋಷ್ಠಿಗಳ ಉದ್ದೇಶ: ಡಾ. ಶಿವಾನಂದ ಕುಬಸದ



**ವಿಜಯಪುರ :** ಇದು ಪಕ್ಷ ಮಾಸದ ತಿಂಗಳು. ಈ ಮಾಸದಲ್ಲಿ ಗುರು ಹಿರಿಯರನ್ನು ವಿಶೇಷವಾಗಿ ನಮ್ಮ ಪೂರ್ವಿಕರನ್ನು ನೆನೆಸುವುದು ದತ್ತಿ ಉಪನ್ಯಾಸಗಳ ಮುಖ್ಯ ಉದ್ದೇಶಗಳಲ್ಲಿ ಒಂದು ಎಂದು ಮುಳವಾಡದ ಖ್ಯಾತ ವೈದ್ಯ ಡಾ. ಶಿವಾನಂದ ಕುಬಸದ ಅಭಿಪ್ರಾಯಪಟ್ಟರು

ಭಾನುವಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ನಡೆದ ದಿ. ಮಹಗುಂಡಪ್ಪ ಕುಬಸದ ದತ್ತಿ ದತ್ತಿದಾನಿಗಳು ಡಾ. ಶಿವಾನಂದ ಕುಬಸದ ಖ್ಯಾತ ವೈದ್ಯರು, ಮುಳವಾಡ ವಿಷಯ ಬಸವಾದಿ ಶರಣರ ಕು–ರಿತು ಚಿಂತನೆ. ದಿ. ಬಸಮ್ಮ ಧರೆಪ್ಪ ಐಹೊಳೆ ದತ್ತಿದಾನಿಗಳು ರಾವುತಪ್ಪ ಧರೆಪ್ಪ ಐಹೊಳೆ ವಿಷಯ ಶರಣ ಶರಣೆಯರ ಚಿಂತನೆಗಳು ಎಂಬ ದತ್ತಿನಿಧಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ವಚನಗಳನ್ನು ಕೇವಲ ಆಲಿಸುವುದಷ್ಟೇ ಅಲ್ಲ ಅವುಗಳ ಪಾಲನೆಯ ಕು–ರಿತು ಮರುಚಿಂತನೆಯಾಗಬೇಕಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಸಾಪ ಗೌರವ ಸಲಹೆಗಾರ ಡಾ. ವ್ಹಿ.ಡಿ.ಐಹೊಳ್ಳಿ, ಕನ್ನಡ ನಾಡು ನುಡಿಯ ಕುರಿತು ಅಭಿಮಾನವನ್ನು ಮೂಡಿಸುವಲ್ಲಿ ಹಾಗೂ ಸಾಹಿತ್ಯದ ಪ್ರೇಮ ಬೆಳೆಸುವಲ್ಲಿ ಪರಿಷತ್ತಿನ ಪಾತ್ರ ಅನನ್ಯವಾದುದು ಎಂದು ಹೇಳುತ್ತಾ, ತಂದೆಯವರ ಸ್ಮರಣಾರ್ಥ ಇಂದು ಏರ್ಪಡಿಸಿದ ಶರಣ ಶರಣೆಯರ ಚಿಂತನೆಗಳನ್ನುನಾವೆಲ್ಲಅರಿತುಕೊಂಡು ಅವುಗಳನ್ನು ಅಳವಡಿಸಿಕೊಳ್ಳೋಣ ಎಂದರು.

"ಬಸವಾದಿ ಶರಣರ ಕುರಿತು" ಉಪನ್ಯಾಸ ನೀಡಿದ ಕಸಾಪ ಸಂಘಟನಾ ಕಾರ್ಯದರ್ಶಿ ಮಹಮ್ಮದ ಗೌಸ ಹವಾಲ್ದಾರ ಮಾತನಾಡಿ, ವಚನ ಸಾಹಿತ್ಯವು ಜಾತಿ, ಧರ್ಮ, ಲಿಂಗ ಬೇಧ, ಮತ್ತು ವರ್ಣಬೇಧ ಎಲ್ಲಾ ಎಲ್ಲೆಗಳನ್ನು ಮೀರಿದ್ದು, ಎಲ್ಲ ವಚನಗಳ ಸಾರ ಮಾನವೀಯ ಮೌಲ್ಯ ಎಂಬುದನ್ನು ಒತ್ತಿ ಹೇಳುತ್ತಾ, ಬಸವಾದಿ ಶಿವಶರಣರ ಚಿಂತನೆಗಳು ನಮಗೆಲ್ಲ ಆದರ್ಶವಾಗಿವೆ ಎಂದರು.

"ಶರಣ ಶರಣೆಯರ ಚಿಂತನೆಗಳ ಕುರಿತು" ಉಪನ್ಯಾಸ ನೀಡಿದ ಕಸಾಪ ಜಿಲ್ಲಾ ಮಹಿಳಾ ಪ್ರತಿನಿಧಿ ಸುಖದೇವಿ ಅಲಬಾಳಮಠ ಮಾತನಾಡಿ, ವಚನಕಾರ ಗಟ್ಟಿವಾಳಯ್ಯ, ಮುಕ್ತಾಯಕ್ಕ ಮತ್ತು ಅಜಗಣ್ಣನ ವಚನಗಳ ಕುರಿತು ವಿಶ್ಲೇಷಣೆ ಮಾಡುತ್ತ ಶಿವಶರಣರ ಚಿಂತನೆಗಳನ್ನು ಇಂದು ನಾವು ಅರ್ಥೈಸಿಕೊಂಡು, ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಪ್ರಸ್ತುತತೆಯನ್ನು ಕುರಿತು ಮಾರ್ಮಿಕವಾಗಿ ತಿಳಿಸಿಕೊಟ್ಟರು.

ಇದೇ ಸಂದರ್ಭದಲ್ಲಿ ಅತಿಥಿಗಳಾಗಿ ಆಗಮಿಸಿದ ರಾವುತಪ್ಪ ಐಹೊಳೆ, ಈರನಗೌಡಪಾಟೀಲ,ಬಸವಲಿಂಗಯ್ಯ ಕೂಡಗಿಮಠ, ರಾಜೇಸಾಬ ಶಿವನಗುತ್ತಿ ಮಾತನಾಡಿದರು.

ಈ ವೇಳೆಯಲ್ಲಿ ಪರಮಾನಂದ ಚಾಂದಕವಟೆ ಅವರನ್ನು ಪರಿಷತ್ತಿನ ಪರವಾಗಿ ಗೌರವಿಸಲಾಯಿತು. ಮೆಹತಾಬ ಕಾಗವಾಡ ತತ್ವ ಗೀತೆ ಹಾಡಿ ರಂಜಿಸಿದರು.

ಪರಿಷತ್ತಿನ ಸದಸ್ಯರಾದ ರಾಜು ಅಂಗಡಿ ಅಕಾಲಿಕ ನಿಧನ ಹೊಂದಿದ್ದರಿಂದ ಅವರಿಗೆ ಶೃದ್ಧಾಂಜಲಿ ಸಲ್ಲಿಸಲಾಯಿತು. ಸ್ವಾಗತ ಹಾಗೂ ಗೌರವ ಸಮರ್ಪಣೆಯನ್ನು ವಿಜಯಲಕ್ಷ್ಮಿ ಹಳಕಟ್ಟಿ ನಡೆಸಿಕೊಟ್ಟರು. ಡಾ. ಆನಂದ ಕುಲಕರ್ಣಿ ಪ್ರಾಸ್ತಾವಿಕ ನುಡಿಗಳನ್ನಾಡಿದರು ಶಿಲ್ಪಾ ಭಸ್ಮೆ ನಿರೂಪಿಸಿದರು. ಸುರೇಶ ಜತ್ತಿ ವಂದಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ, ಅಭಿಷೇಕ ಚಕ್ರವರ್ತಿ, ಡಾ. ಮಾಧವ ಎಚ್ ಗುಡಿ, ಎಸ್, ಎಲ್, ಇಂಗಳೇಶ್ವರ, ಸಿದ್ರಾಮಯ್ಯ ಲಕ್ಕುಂಡಿಮಠ, ಕಮಲಾ ಮುರಾಳ, ಆಶಾ ಬಿರಾದಾರ, ಸಾಯಬಣ್ಣ ಕಂಕಣವಾಡಿ, ಸಿದ್ರಾಮಪ್ಪ ಜಂಗಮಶೆಟ್ಟಿ, ವಿವೇಕಾನಂದ ಐಹೊಳ್ಳಿ, ಜಿ.ಎಸ್.ಬಳ್ಳೂರ, ಆನಂದ ಕಂಬಾರ, ಆರತಿ ಐಹೊಳ್ಳಿ, ಜಂಬುನಾಥ ಕಂಚ್ಯಾಣಿ, ಬಿ.ಎಸ್ ಕೋನರೆಡ್ಡಿ, ಅಜುನ ಶಿರೂರ, ಶಿವಾಜಿ ಮೋರೆ, ಸುರೇಶ ಜೇಬಿ, ಡಾ. ಸುರೇಶ ಕಾಗಲಕರರೆಡ್ಡಿ, ರುದ್ರಪ್ಪ ಮೇಣಸಗಿ, ರಿಹಾನ ಹಳ್ಳೂರ, ಕಸ್ತೂರಿಬಾಯಿ ಐಹೊಳ್ಳಿ, ಎಸ್.ಎಸ್ ಬಡಿಗೇರ, ಶ್ರೀಕಾಂತ ನಾಡಗೌಡ, ಎನ್.ಎಸ್ ಶಿವಣಕರ, ವಜೀರ ಅಹ್ಮದ ಕೊಪ್ಪಳ ಮುಂತಾದವರು ಉಪಸ್ಥಿತರಿದ್ದರು.

# ಕೆಕೆಆರ್ಟಿಸಿ ಎಸ್ಸಿ ಎಸ್ಟಿ ನೌಕರರ ಸಂಘದಿಂದ ಅಂಬೇಡ್ಕರ್ ಜಯಂತಿ ಆಚರಣೆ



● ವಾರ್ತಾಲೋಕ ವಾರ್ತೆ

**ಬಳ್ಳಾರಿ: ಅ4** .ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಡಾ. ಅಂಬೇಡ್ಕರ್ ಮೀಸಲಾತಿ ಯನ್ನು ನೀಡಿರುವುದಿಲ್ಲ ಮೀಸಲಾತಿ ಎನ್ನುವ ಪರಿಕಲ್ಪನೆ ರಾಜ ಮಹಾರಾಜರಿಂದಲೂ ಜಾರಿಯ ಲ್ಲಿರುವ ವ್ಯವಸ್ಥೆಯಾಗಿದೆ, ಇದನ್ನು ಸರಿಯಾಗಿ ತಿಳಿದುಕೊಳ್ಳದೆ ಮೇಲ್ವರ್ಗದವರು ಅಂಬೇಡ್ಕರ್ ಕೇವಲ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಮೀಸಲಾತಿಯನ್ನು ತಂದಿದ್ದಾರೆ ಎಂದು ಗೂಬೆ ಕೂರಿಸುತ್ತಿದ್ದಾರೆ ಇತಿಹಾಸವನ್ನು ಸರಿಯಾಗಿ ತಿಳಿದುಕೊಳ್ಳದೆ ಹೀಗೆ ದೂರುವುದು ಸರಿಯಲ್ಲ ಎಂದು ಲಿಡ್ಕರ್ ಅಧ್ಯಕ್ಷ ಮುಂಡರಗಿ ನಾಗರಾಜ್ ಅಭಿಪ್ರಾಯ ಪಟ್ಟರು. ಅವರು ಇದ್ದು ನಗರದ ಕೆಕೆಆರ್‌ಟಿಸಿ ವಿಭಾಗಿಯ ಕಚೇರಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡ ನೌಕರರ ಸಂಘದಿಂದ ಹಮ್ಮಿಕೊಂಡಿದ್ದ ಡಾಕ್ಟರ್ ಬಿ ಆರ್ ಅಂಬೇಡ್ಕರ್ ಅವರ 134 ನೇ ಜನ್ಮ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿ, ಮೀಸಲಾತಿ ವ್ಯವಸ್ಥೆಯನ್ನು ಜಾರಿಗೊಳಿಸಿದವರು ಮೊಟ್ಟ ಮೊದಲನೆಯದಾಗಿ 1902ರಲ್ಲಿ ಮಹಾರಾಷ್ಟ್ರದ ಛತ್ರಪತಿ ಶಾಹು ಮಹಾರಾಜ್ ರವರು, ನಂತರ 1924ರಲ್ಲಿ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ರು ಸುಮಾರು 75 ಪರ್ಸೆಂಟ್ ನಷ್ಟು ಮೀಸಲಾತಿಯನ್ನು ಜಾರಿಗೊಳಿಸಿದರು, ತದನಂತರ ಸ್ವತಂತ್ರಕ್ಕೂ ಮುಂಚೆ ಮಹಾರಾಷ್ಟ್ರದ ಪುಣೆಯ ಎರವಾಡ ಜೈಲಿನಲ್ಲಿ ಮಹಾತ್ಮ ಗಾಂಧಿ, ಅಂಬೇಡ್ಕರ್ ಸೇರಿದಂತೆ ಇತರ ನಾಯಕರು ಸಭೆ ಸೇರಿ ಮೀಸಲಾತಿಯನ್ನು ಅಂತಿಮಗೊಳಿಸಿದರು ಇದು ಸ್ವತಂತ್ರ ಭಾರತಕ್ಕೂ ಮುನ್ನ ಕೈಗೊಂಡ ನಿರ್ಧಾರವಾಗಿರುತ್ತದೆ. ಇದನ್ನು ತಿಳಿದುಕೊಳ್ಳದೆ ಉನ್ನತ ವರ್ಗದವರು ಮೀಸಲಾತಿಯನ್ನು ಜಾರಿಗೊಳಿಸಿದ್ದು ಅಂಬೇಡ್ಕರ್ ಎಂದು ಮೂಗು ಮುರಿಯುತ್ತಾರೆ ಇದು ತಪ್ಪು ಇತಿಹಾಸವನ್ನು ಸರಿಯಾಗಿ ತಿಳಿದುಕೊಳ್ಳಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ನಿವೃತ್ತ ಸರ್ಕಾರಿ ಅಭಿಯೋಜಕರಾದ ಈ ಜಯರಾಮ್ ಮಾತನಾಡಿ, ಸಾರಿಗೆ ನಿಗಮದಲ್ಲಿ ಚಾಲಕರಿಂದ ಅಕಸ್ಮಾತಾಗಿ ಅಪಘಾತವಾದಲ್ಲಿ ಅವರ ಬದುಕು ದುರ್ಬರವಾಗುತ್ತದೆ ಅವರಿಗೆ ನ್ಯಾಯಾಲಯದಲ್ಲಿ ಶುಲ್ಕ ಅಥವಾ ನ್ಯಾಯವಾದಿಗಳಿಗೆ ಶುಲ್ಕ ನೀಡುವುದು ಆಗದೆ ಪರದಾಡುತ್ತಾರೆ, ಇದನ್ನು ಮನಗಂಡು ನಿಗಮವುದೇ ವತಿಯಿಂದ ಅವರಿಗೆ ಕಾನೂನು ಸಲಹೆಗಾರರನ್ನು ನೇಮಿಸಿ ಕೊಡಬೇಕು, ಮತ್ತು ಸಾರಿಗೆ ನೌಕರರನ್ನು ಸರ್ಕಾರಿ ನೌಕರರ ಪರಿಗಣಿಸಿ ಅವರಿಗೆ ಪಿಎಫ್ ಪಿಂಚಣಿ ಸೇರಿದಂತೆ ಸರ್ಕಾರಿ ನೌಕರರಿಗೆ ಸಿಗುವ ಎಲ್ಲಾ ಸೌಲಭ್ಯಗಳನ್ನು ದೊರಕಿಸಿಕೊಡಬೇಕು ಎಂದು ಒತ್ತಾಯಿಸಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡದ ಅಸೋಸಿಯೇಷನ್ ವಲಯ ಅಧ್ಯಕ್ಷರಾದ ಚಂದ್ರಕಾಂತ್ ಗದ್ದಗಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಉದ್ಘಾಟನಾ ಭಾಷಣವನ್ನು ಮಾಡಿದರು, ಪರಿಶಿಷ್ಟ ಜಾತಿ ಮತ್ತು ಪಂಗಡದ ನೌಕರರ ಸಂಘದ ವಿಭಾಗಿ ಅಧ್ಯಕ್ಷರಾದ ವದ್ದಟ್ಟಿ ಈರಸ್ವಾಮಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತಿ ಪ್ರೊಫೆಸರ್ ಡಾಕ್ಟರ್ ಕೆ ಎಂ ಮೇತ್ರಿ ಉಪನ್ಯಾಸ ನೀಡಿದರು.

ಈ ಜನ್ಮ ದಿನಾಚರಣೆ ಸಮಾರಂಭದಲ್ಲಿ ವಿಭಾಗ ನಿಯಂತ್ರಣ ಅಧಿಕಾರಿಗಳಾದ ವಿನಾಯಕ್ ಭಗವಾನ್, ವಿಭಾಗೀಯ ಸಂಚಲನಾ ಧಿಕಾರಿಯಾಗಿ ಚಾಮರಾಜ, ವಲಯ ಪ್ರಧಾನ ಕಾರ್ಯದರ್ಶಿ ಶ್ರೀರಾಮಚಂದ್ರ ಅಯ್ಯಳ್ಕರ್, ಜಾಗೃತಾಧಿಕಾರಿಯಾದ ಶಾರದಾಂಬಲಿ, ವಿಭಾಗಿಯ ಸಹಾಯಕ ಆಡಳಿತ ಅಧಿಕಾರಿಗಳಾದ ಸಿದ್ದರಾಜ್ ಸೇರಿದಂತೆ ಸಿದ್ದರಾಜ್, ಪಾಲಾಕ್ಷಿ ಹರತಿ, ಮಂಜುನಾಥ್ ಹಂಪನಗೌಡ ಜೀವನ್ ರೆಡ್ಡಿ ಶಿವಕುಮಾರ್ ಶಿವಪ್ರಕಾಶ್ ಗಂಗಾಧರ್ ಸೇರಿದಂತೆ ಹಲವಾರು ಸಾರಿಗೆ ನೌಕರರು ಚಾಲಕರು ಮತ್ತು ನಿರ್ವಾಹಕರು ಇದ್ದರು.

# ಓದುವ ಹವ್ಯಾಸ ಬೆಳೆಸಿಕೊಳ್ಳಿ



**ಧಾರವಾಡ :** ಕನ್ನಡದ ಸುಪ್ರಸಿದ್ಧ ಬರಹಗಾರರಾದ ಪ್ರೊ. ಮಾಲತಿ ಪಟ್ಟಣಶೆಟ್ಟಿಅವರಿಂದ ಲೇಖಕರೊಂದಿಗೆ ಭೇಟಿಕಾರ್ಯಕ್ರಮಇಲ್ಲಿನ ವಿದ್ಯಾವರ್ಧಕ ಸಂಘದಲ್ಲಿ ನಡೆಯಿತು. ತಮ್ಮ ಬದುಕು ಬರಹವನ್ನು ಮುಕ್ತಕಂಠದಿಂದ ಹಂಚಿಕೊಂಡ ಮಾಲತಿಯವರುತಮ್ಮ ಬರವಣಿಗೆಯ ಮೂಲ ಪ್ರೇರಣೆ ಬದುಕಿನ ವಿದ್ಯಮಾನಗಳೇ ಆಗಿವೆ. ತಮ್ಮ ಬದುಕುತೆರೆದಿಟ್ಟ ಪುಸ್ತಕದಂತಿದ್ದು, ನನ್ನ ಕಷ್ಟಗಳು ಮತ್ತು ಕಾಲಕಾಲಕ್ಕೆ ಎದುರಾದ ಸವಾಲುಗಳು ನನ್ನನ್ನು ಈ ಮಟ್ಟಕ್ಕೆ ರೂಪಿಸಿವೆ ಎಂದರು. ಲೇಖಕರುತಮ್ಮಅನುಭವವನ್ನು ಹರಳುಗಟ್ಟಿಸಿಕೊಂಡು ಭಾಷೆಯ ಮೇಲೆ ಹಿಡಿತ ಸಾಧಿಸಿ ಬರವಣಿಗೆ ಮಾಡಬೇಕು. ಬರಹಗಾರನಿಗೆಅದರಲ್ಲೂ ವಿಶೇಷವಾಗಿ ಉದಯೋನ್ಮುಖ ಹೊಸತಲೆಮಾರಿನ ಲೇಖಕರುಹೆಚ್ಚುಹೆಚ್ಚು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು. ತಮ್ಮ ಬರವಣಿಗೆಯ ಹಿಂದೆ ಬದುಕಿನಲ್ಲಿಎದುರಾದ ಸಂಕಟಗಳ ಸರಮಾಲೆಯೇಅನಾವರಣಗೊಂಡಿದೆ. ಹಾಗೆಂದ ಮಾತ್ರಕ್ಕೆ ನಾವು ನಿರಾಶಾವಾದಿಗಳು ಆಗಬೇಕಾಗಿಲ್ಲ. ನಡೆದುಹೋದ ಘಟನೆಗಳಿಗೆ ಪಶ್ಚಾತಾಪಪಡುತ್ತ ಕುಳಿತುಕೊಂಡರೆ ಬದುಕು ಮತ್ತಷ್ಟುದುಸ್ತರವಾಗುತ್ತದೆ. ಯುವಜನಾಂಗದವರು ಬದುಕಿನಉತ್ಸಾಹವನ್ನು ಕಳೆದುಕೊಳ್ಳದೆ ಸ್ವಸ್ಥಜೀವನವನ್ನು ನಡೆಸಲು ಮುಂದಾಗಬೇಕು. ಆರೋಗ್ಯಕರ ಮನಸ್ಸಿನಿಂದ ಮಾತ್ರಆರೋಗ್ಯಕರ ಸಾಹಿತ್ಯ ಬರಲು ಸಾಧ್ಯವಾಗುತ್ತದೆ ಎಂದರು.

ಸಭಿಕರು ಸರಣಿರೂಪದಲ್ಲಿ ಕೇಳಿದ ಎಲ್ಲ ಪ್ರಶ್ನೆಗಳಿಗೂ ಸಮಾಧಾನದಿಂದ ಉತ್ತರಿಸಿದ ಪ್ರೊ. ಮಾಲತಿ ಪಟ್ಟಣಶೆಟ್ಟಿಯವರುತಮ್ಮ ಬದುಕು ಬರಹಕುರಿತಾದ ಹಿನ್ನೆಲೆಗಳನ್ನು ಹಂಚಿಕೊಂಡರು. ಸಂವಾದದಲ್ಲಿ ವೆಂಕಟೇಶ ಮಾಚಕನೂರ, ಸತೀಶಕುಲಕರ್ಣಿ, ರಾಜೇಶ್ವರಿ ಮಹೇಶ್ವರಯ್ಯ, ಡಿ. ಎಂ. ಹಿರೇಮಠ, ಶ್ರೀನಿವಾಸ ವಾಡಪ್ಪಿ, ಸರಸ್ವತಿ ಭೋಸಲೆ, ಶಕುಂತಲಾ ಸಿಂಧೂರ, ಅಶೋಕ ಶೆಟ್ಟರ, ಅರವಿಂದ ಯಾಳಗಿ, ಆರ್. ಈ. ತಿಮ್ಮಾಪುರ, ಪಾರ್ವತಿ ಹಾಲಭಾವಿ, ಬಾಳಣ್ಣ ಶೀಗಿಹಳ್ಳಿ, ಸುನಂದಾಕಡಮೆ, ವಿಶ್ವೇಶ್ವರಿ ಹಿರೇಮಠ ಮುಂತಾದವರು ಸಕ್ರೀಯವಾಗಿ ಸಂವಾದದಲ್ಲಿ ಪಾಲ್ಗೊಂಡರು. ಆರಂಭದಲ್ಲಿಕೇಂದ್ರ ಸಾಹಿತ್ಯಅಕಾದೆಮಿಯಕನ್ನಡ ಸಲಹಾ ಸಮಿತಿ ಸದಸ್ಯರಾದಚನ್ನಪ್ಪಅಂಗಡಿಯವರು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿಕಾರ್ಯಕ್ರಮದರೂಪುರೇಶೆಯನ್ನು ವಿವರಿಸಿದರು. ಕವಿವ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ, ಮಾಲತಿ ಪಟ್ಟಣಶೆಟ್ಟಿಯವರ ವ್ಯಕ್ತಿತ್ವಕುರಿತಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಬಸವಪ್ರಭು ಹೊಸಕೇರಿ, ಶಿವಾನಂದ ಭಾವಿಕಟ್ಟಿ, ನರಸಿಂಹ ಪರಾಂಜಪೆ, ಆನಂದ ಪಾಟೀಲ, ಶಿವಶಂಕರ ಹಿರೇಮಠ, ಸದಾಶಿವ ಮರ್ಜಿ ಮುಂತಾದಗಣ್ಯರುಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆರಂಭದಲ್ಲಿ ಸುಜಾತಾಗುರವಅವರು ಮಾಲತಿ ಪಟ್ಟಣಶೆಟ್ಟಿಯವರ ಭಾವಗೀತೆಗಳನ್ನು ಪ್ರಸ್ತುತಪಡಿಸಿದರು. ಸಾಹಿತ್ಯಅಕಾದೆಮಿಗಾಗಿ ಮಾಲತಿ ಪಟ್ಟಣಶೆಟ್ಟರಉಲ್ಲೇಖಪತ್ರ ತಯಾರಿಸಿದ ಶ್ಯಾಮಲಾರತ್ನಾಕರವರು ಸಭೆಯಲ್ಲಿಅದನ್ನು ವಾಚಿಸಿದರು.

# ಕಲಘಟಗಿ: ಸೋಯಾಬಿನ್ ಖರೀದಿ ಕೇಂದ್ರ ಆರಂಭ

**ಕಲಘಟಗಿ:** ರೈತರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಬೆಂಬಲ ಬೆಲೆ ಯೋಜನೆಯಡಿ ಸೋಯಾಬಿನ್ ಕಾಳು ಖರೀದಿ ಕೇಂದ್ರ ಆರಂಭಿಸಿದ್ದು ತಾಲ್ಲೂಕಿನ ರೈತರು ಇದರ ಸದುಪಯೋಗ ಪಡೆದುಕೊಳ್ಳಿ ಎಂದು ಕೆಸಿಸಿ ಬ್ಯಾಂಕ್ ನಿರ್ದೇಶಕ ಮಂಜುನಾಥಗೌಡ ಮುರಳ್ಳಿ ತಿಳಿಸಿದರು.

ಪಟ್ಟಣದ ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರಿ ಸಂಘದಲ್ಲಿ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ನಿಯಮಿತ, ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ನ್ಯಾಫೆಡ್ ಸಂಸ್ಥೆಯ ಪರವಾಗಿ 2024–25ನೇ ಸಾಲಿನ ತೆರೆಲಾಗಿದ್ದ ಎಫ್.ಎ.ಕ್ಯೂ ಗುಣಮಟ್ಟದ ಸೋಯಾಬಿನ್ ಖರೀದಿ ಕೇಂದ್ರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸೊಸೈಟಿ ವ್ಯವಸ್ಥಾಪಕ ಬಸವನಗೌಡ್ರ



ಮುದಿಗೌಡ್ರ ಮಾತನಾಡಿ, 'ಬೆಂಬಲ ಬೆಲೆ ಪ್ರತಿ ಕ್ವಿಂಟಲ್ ಗೆ ?4,892ರಂತೆ ಒಬ್ಬ ರೈತನಿಂದ ಪ್ರತಿ ಎಕರೆಗೆ 5 ಕ್ವಿಂಟಲ್‌ನಂತೆ ಗರಿಷ್ಠ 20 ಕ್ವಿಂಟಲ್ ಮಾತ್ರ ಖರೀದಿಸಲಾಗುವುದು' ಎಂದರು.

ಈಗಾಗಲೇ ನೋಂದಣಿ ಕಾರ್ಯ ಆರಂಭವಾಗಿದ್ದು ರೈತರು ಹೆಚ್ಚಿನ ಮಾಹಿತಿಗಾಗಿ 8722006738 ಸಂಪರ್ಕಿಸಲು ಕೋರಲಾಗಿದೆ ಎಂದರು.

ಮಾರ್ಕೆಟಿಂಗ್ ಸೊಸೈಟಿ ಉಪಾಧ್ಯಕ್ಷ ದ್ಯಾಮಣ್ಣ ಬಡಿಗೇರ ನಿರ್ದೇಶಕರಾದ ವೃಷಭ ಬೇಂದ್ರೆ ಪಟ್ಟಣಶೆಟ್ಟಿ, ಕಲ್ಲಪ್ಪ ಅರಶಿಣಗೇರಿ, ನಿಂಬಣ್ಣ ಕುಬ್ಯಾಳ, ಯಲ್ಲಪ್ಪ ಚೌರಗಿ, ಮಹೇಶ ಅಲಗೂರ, ಕಲ್ಮೇಶ ಹಣಮಣ್ಣವರ ಇದ್ದರು.

# ಆರ್ ವೈ ಎಂ ಸಿ ಕಾಲೇಜಿನಲ್ಲಿ ಕಲಬುರ್ಗಿ ವಲಯದ ಖೋ-ಖೋ ಪಂದ್ಯಾವಳಿ

● ವಾರ್ತಾಲೋಕ ವಾರ್ತೆ

**ಬಳ್ಳಾರಿ ಅಕ್ಟೋಬರ್ 4.** ನಗರದ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾದ ವೀರಶೈವ ವಿದ್ಯಾವರ್ಧಕ ಸಂಘದ ಸಂಸ್ಥೆಯಾದ ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪ ತಾಂತ್ರಿಕ ಮಹಾವಿ ದ್ಯಾಲಯದಲ್ಲಿ ಪುರುಷರ ಖೋ-ಖೋ ಪಂದ್ಯಾವಳಿಗಳು ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯ ಮತ್ತು ಕಲಬುರ್ಗಿ ವಲಯದ ಪಂದ್ಯಾವಳಿಗಳು ಜರುಗಿದವು.

ಕಾಲೇಜಿನ ಅಧ್ಯಕ್ಷ ಜಾನೆಕುಂಟೆ ಬಸವರಾಜ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿ, ಇಂಜಿನಿಯರ್ ಗಳಂತಹ ವೃತ್ತಿಪರ ವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ದೈಹಿಕ ಸಾಮರ್ಥ್ಯವು ಮುಖ್ಯವಾಗಿದೆ ಈ ತರಹದ ಪಂದ್ಯಾವಳಿಗಳು ಜರುಗುವುದರಿಂದ ನಮ್ಮ ದೇಹ ಚುರುಕಾಗಿ, ಸ್ತಿಮಿತದಲ್ಲಿರುತ್ತದೆ, ಈ ಆಟಗಳು ಗ್ರಾಮೀಣ



ಪ್ರದೇಶಗಳಲ್ಲಿ ಅತಿ ಹೆಚ್ಚು ಪ್ರಚಲಿತಗೊಂಡಿರುತ್ತವೆ. ಈ ಆಟಕ್ಕೆ ಯಾವುದೇ ಸಲಕರಣೆಗಳು ಬೇಕಾಗಿರುವುದಿಲ್ಲ. ಕೇವಲ ಸ್ವಲ್ಪ ಬಯಲು ಸ್ಥಳವಿದ್ದರೆ ಸಾಕು. ಗ್ರಾಮೀಣ ಯುವಕರಿಗೆ ಈ ಆಟವು ಅಚ್ಚುಮೆಚ್ಚು ಎಂದು ಹೇಳಿ ಎಲ್ಲಾ ಪಟುಗಳಿಗೆ ಶುಭಹಾರೈಸಿದ

ಈ ಪಂದ್ಯಾವಳಿಗಳಲ್ಲಿ ವಿಶ್ವೇಶ್ವರಾಯ ತಾಂತ್ರಿಕ ವಿಶ್ವ ವಿದ್ಯಾಲಯ ವಿಟಿಯು ಕಲಬುರ್ಗಿ ವಲಯದ ವ್ಯಾಪ್ತಿಯಲ್ಲಿರುವ ಎಲ್ಲಾ ತಾಂತ್ರಿಕ ಮಹಾವಿದ್ಯಾಲಯಗಳ ತಂಡಗಳು ಪಾಲ್ಗೊಂಡಿದ್ದವು.

ಈ ಪಂದ್ಯಾವಳಿಗಳ ಕಾರ್ಯಕ್ರಮಕ್ಕೆ ಮಹಾವಿದ್ಯಾಲಯದ ಜಾನೆಕುಂಟೆ ಬಸವರಾಜ- ಅಧ್ಯಕ್ಷರು, ಆರ್‌ವೈಎಂಇಸಿ, ಪ್ರಾಂಶುಪಾಲರಾದ ಡಾ. ಟಿ.ಹನುಮಂತರೆಡ್ಡಿ, ಡಾ. ಎಸ್.ಕೊಟ್ರೇಶ ವಿದ್ಯುತ್ ಇಂಜಿನಿಯರಿಂಗ್ ವಿಭಾಗ, ಚಂದ್ರಶೇಖರ್- ಕ್ರೀಡಾ ಸಂಯೋಜಕರು ಇಸಿಇ ವಿಭಾಗ ಆರ್‌ವೈಎಂಇಸಿ ಈ ಪಂದ್ಯಾವಳಿಗೆ ಚಾಲನೆ ನೀಡಿದರು. ದೈಹಿಕ ಶಿಕ್ಷಕರು - ಶ್ರೀವಿಜಯ ಮಹಾಂತೇಶ್, ಅಶೋಕ್-ಬಿಐಟಿಎಂ, ಸುನಿತಾ - ವೈದ್ಯಕೀಯ ವಿಭಾಗ, ಅಧಿಕಾರಿಗಳು (ರೆಫರಿಗಳು)- ಬಾಲಕೃಷ್ಣ-ಪ್ಯೂಪಿಲ್ ಟ್ರೀ, ಟೈಗರ್ ಬಾಬು- ಸರ್ಕಾರಿ ಶಾಲೆ, ನಾಗೇಶ್ ನಂದಾ ಪಿ.ಯು ಕಾಲೇಜ್, ಬಬ್ಬಲು ನಂದಾ ಪಿ.ಯು ಕಾಲೇಜ್, ಮಹಾವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿವರ್ಗದವರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಕುರುಗೋಡು ತಾಪಂ. ಸಾಮಾನ್ಯಸಭೆಯಲ್ಲಿ ಜಿಪಂ. ಮುಖ್ಯಯೋಜನಾಧಿಕಾರಿ ವಾಗೀಶ್‌ಶಿವಾಚಾರ್ಯ ಸೂಚನೆ ಸರ್ಕಾರದ ಯೋಜನೆಗಳನ್ನು ಅಧಿಕಾರಿಗಳು ಜನರಿಗೆ ತಲುಪಿಸಿರಿ

● ವಾರ್ತಾಲೋಕ ವಾರ್ತೆ

**ಕುರುಗೋಡು.ಅ.4** ರಾಜ್ಯ ಸರ್ಕಾರದ ಮಹಾತ್ವಾಕಾಂಕ್ಷಿ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ತಾಲೂಕು ಮಟ್ಟದ ವಿವಿದ ಇಲಾಖೆಯ ಅಧಿಕಾರಿಗಳು ಪ್ರಮಾಣಿಕವಾಗಿ ಮುತುವರ್ಜಿವಹಿಸಿ ಕಾರ್ಯನಿರ್ವಹಿಸಬೇಕು, ಒಂದುವೇಳೆ ವಿಳಂಬವಾದರೆ ಅಂಥಹ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಬಳ್ಳಾರಿ ಜಿಪಂ. ಮುಖ್ಯಯೋಜನಾಧಿಕಾರಿ ವಾಗೀಶಶಿವಾಚಾರ್ಯರು ಅಧಿಕಾರಿಗಳಿಗೆ ಖಡಕ್ಕಾಗಿ ಸೂಚನೆ ನೀಡಿದರು.

ಅವರು ಪಟ್ಟಣದ ತಾಲೂಕುಪಂಚಾಯಿತಿ ಸಭಾಂಗಣದಲ್ಲಿ ಕರೆಯಲಾಗಿದ್ದ ಜಿಪಂ. ಬಳ್ಳಾರಿ ಹಾಗು ತಾಪಂ. ಕುರುಗೋಡು ಇವರ ಸಂಯುಕ್ತಾಶ್ರಯದಲ್ಲಿ ಕರೆಯಲಾಗಿದ್ದ 4ನೇ ಸಾಮಾನ್ಯಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶಿಕ್ಷಣ, ಆರೋಗ್ಯ, ನೀರಾವರಿ, ಕೃಷಿ, ತೋಟಗಾರಿಗೆ, ಪಶುಸಂಗೋಪನೆ, ಪಂಚಾಯತ್‌ರಾಜ್‌ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸೇರಿದಂತೆ ಇತರೆ ಇಲಾಖೆಗಳ ಯೋಜನೆಗಳನ್ನು ಅರ್ಹ ಫಲಾಭುವಿಗಳಿಗೆ ಮುಟ್ಟುವಂತೆ ಕ್ರಿಯಾಶೀಲರಾಗಿ ಅಧಿಕಾರಿಗಳು ಕಾರ್ಯನಿರ್ವಹಿಸಬೇಕೆಂದು ಸಲಹೆ ನೀಡಿದರು. ಮಾತ್ರವಲ್ಲದೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಉತ್ತಮ




ಫಲಿತಾಂಶಪಡೆಯಲು ಮುಂಜಾಗ್ರತಕ್ರಮ ಕೈಗೊಳ್ಳಬೇಕೆಂದು ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಚಿಸಲಾಯಿತು.

ಸಿಂದಿಗೇರಿ ಹಾಗು ಸೋಮಸಮುದ್ರ ಗ್ರಾಮಗಳಲ್ಲಿ ಗ್ರಂಥಾಲಯ ನಿರ್ಮಾಣ, ಹಾಗು ಕೆರೆಕೆರೆ ಹಾಗು ಕೋಳೂರು ಗ್ರಾಮದಲ್ಲಿ ಹೆಚ್ಚುವರಿ ಕೊಠಡಿಗಳನ್ನು ನಿರ್ಮಾಣಮಾಡಲು, ಅಲ್ಲದೆ ಮಹಿಳೆಯ ಬೇಡಿಕೆಯಂತೆ ಐಟೆಕ್ ಶೌಚಾಲಯ ನಿರ್ಮಾಣ ಮಾಡಲು ಸಭೆಯಲ್ಲಿ ಸೂಚಿಸಲಾಯಿತು. ನಂತರ ನಡೆದ ಸಭೆಯಲ್ಲಿ ಕುರುಗೋಡು ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳನ್ನು ತ್ವರಿತಗತವಾಗಿ ಮಾಡಿ ಜನರಿಗೆ ನೆರವಾಗುವಂತೆ ಅಧಿಕಾರಿಗಳಿಗೆ ಸಲಹೆ ನೀಡಲಾಯಿತು. ಅನಿಲ್‌ಕುಮಾರ್ ಪ್ರಾರಂಭದಲ್ಲಿ ಎಲ್ಲರನ್ನು ಸ್ವಾಗತಿಸಿದರು. ರಾಜಶೇಖರ್‌ಗೌಡ ಅವರು ಕೊನೆಯಲ್ಲಿ ವಂದಿಸಿದರು.

ಸಭೆಯಲ್ಲಿ ಕುರುಗೋಡು ತಾಪಂ. ಇಓ.ನಿರ್ಮಲ, ಕುರುಗೋಡುನರೇಗಾ ಸಹಾಯಕ ನಿರ್ದೇಶಕ ಶಿವರಾಮರೆಡ್ಡಿ, ಪಂಚಾಯತ್‌ರಾಜ್ ಸಹಾಯಕನಿರ್ದೇಶಕ ಅನಿಲ್‌ಕುಮಾರ್, ಸಹಾಯಕ ಕೃಷಿ ನಿರ್ದೇಶಕ ದಯಾನಂದ, ಕ್ಷೇತ್ರಶಿಕ್ಷಣಾಧಿಕಾರಿ ಸಿದ್ದಲಿಂಗಯ್ಯಸ್ವಾಮಿ, ತಾಲೂಕುವೈದ್ಯಾಧಿಕಾರಿ ಮಂಜುನಾಥಜವಳಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಎಸಿಡಿಪಿಓ. ಗಂಗಮ್ಮ, ಸೇರಿದಂತೆ ತೋಟಗಾರಿಕೆ, ಪಂಚಾಯತ್‌ರಾಜ್, ಪಶುಸಂಗೋಪನೆಇಲಾಖೆ, ಸಾರಿಗೆ, ಶಿಕ್ಷಣ, ಆರೋಗ್ಯ, ಸಮಾಜಕಲ್ಯಾಣ ಇಲಾಖೆ, ಬಿಸಿಎಂ ಇಲಾಖೆ, ನೀರಾವರಿ ಸೇರಿದಂತೆ ಇತರೆ ತಾಲೂಕು ಮಟ್ಟದ ಅಧಿಕಾರಿಗಳು ಹಾಗು ತಾಪಂ. ಸಿಬ್ಬಂದಿವರ್ಗದವರು ಇದ್ದರು.

# ಐ.ಪಿ.ಎಸ್.ಅಧಿಕಾರಿ ಎಂ.ಚಂದ್ರಶೇಖರವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಮೀನಳ್ಳಿ ತಾಯಣ್ಣ ಒತ್ತಾಯ

● ವಾರ್ತಾಲೋಕ ವಾರ್ತೆ

**ಬಳ್ಳಾರಿ ಅ 4 :** ಐಪಿಎಸ್ ಅಧಿಕಾರಿ ಚಂದ್ರಶೇಖರ್ ಎಂಬುವರು ಹಲವಾರು ಭೂಗಳ್ಳರು, ವ್ಯಾಪಾರಸ್ಥರು, ಉದ್ಯಮಿಗಳು, ಸಮಾಜಘಾತಕರು ಹಾಗೂ ಮಾಫಿಯಾ ದೊಂದಿಗೆ ಒಡನಾಟ ಬೆಳೆಸಿಕೊಂಡು ಅವರ ಜೊತೆ ಶಾಮೀಲಾಗಿ ಹಲವಾರು ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ, ನನ್ನ ತಪ್ಪನ್ನು ಮುಚ್ಚಿಟ್ಟುಕೊಂಡು ಜಾತ್ಯತೀತ ಜನತಾದಳದ ರಾಜ್ಯ ಅಧ್ಯಕ್ಷರು ಹಾಗೂ ಕೇಂದ್ರ ಸಚಿವರಾದ ಎಚ್ ಡಿ ಕುಮಾರಸ್ವಾಮಿ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ ಚಂದ್ರಶೇಖರ್ ಅವರನ್ನು ಹುದ್ದೆಯಿಂದ ವಜಗೊಳಿಸಿ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಜೆಡಿಎಸ್ ಬಳ್ಳಾರಿ ಜಿಲ್ಲಾ ಅಧ್ಯಕ್ಷರಾದ ಮೀನಳ್ಳಿ ತಾಯಣ್ಣ ಸರ್ಕಾರವನ್ನು ಆಗ್ರಪಡಿಸಿದರು.

ಅವರು ಇಂದು ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಪತ್ರವನ್ನು ಸಲ್ಲಿಸಿ ಮಾತನಾಡಿ, ಸರಣಿ ಅಪರಾಧ ಕೃತ್ಯಗಳಲ್ಲಿ ಭಾಗವಹಿಸಿರುವ ಈ ಭ್ರಷ್ಟ ಅಧಿಕಾರಿ ಆಗಿರುತ್ತಾರೆ, ಇವರ ವಿರುದ್ಧ ಶ್ರೀಧರ್ ಎನ್ನುವರು ಈಗಾಗಲೇ ಗೃಹ ಇಲಾಖೆಯ ಪ್ರಧಾನ ಕಾಯ್ದರ್ಶಿಯವರಾದ ರಜನೀಶ್ ಗೋಯಲ್ ಅವರಿಗೆ ದೂರು ನೀಡಿದ್ದು ಎಂ. ಚಂದ್ರಶೇಖರ್ ರವರ ಪೊಲೀಸ್ ಇಲಾಖೆಯಲ್ಲಿ ಪ್ರಮುಖ ಪಾತ್ರವಹಿಸಿ ಇಲಾಖೆಯ ಘನತೆ ಮತ್ತು ಗಾಂಭೀರ್ಯತೆಯನ್ನು ಕಳೆದಿರುತ್ತಾರೆ. ಶಿಸ್ತು ಸಿಪಾಯಿಗಳಾದಂತಹ ಕರ್ನಾಟಕ ಪೊಲೀಸ್‌ಇ ಲಾಖೆಯಲ್ಲಿ ಅಶಿಸ್ತು ಬೆಳೆಯಲು ಮುಖ್ಯ, ಕಾರಣಕರ್ತರಾಗಿರುತ್ತಾರೆ.

ಕೇಂದ್ರ ಸಚಿವರು ಹಾಗೂ



ಚುನಾಯಿತ ಜನಪ್ರತಿನಿಧಿಗಳ ವಿರುದ್ಧ ಕ್ರಮಕೈಗೊಳ್ಳಲು ಭಾರತೀಯ ಆಡಳಿತ ಸೇವಾ ನಿಯಮಗಳ ಪ್ರಕಾರ (ಂಟಟ ಖಟಿಜಚಿ ಖಜಡಿತುಥಿಜ ಖಣಟಛ-1958) ರಂತ ಕೇಡರ್ ಪ್ರಾಧಿಕಾರದ ಅನುಮತಿ ಪಡೆಯಬೇಕಾಗಿರುತ್ತದೆ. ಆದರೆ ಎಂ.ಚಂದ್ರಶೇಖರ್ ರವರು ಭಾರತೀಯ ಆಡಳಿತ ಸೇವಾ ನಿಯಮಗಳ ವಿರುದ್ಧವಾಗಿ ತನ್ನ ಕೈಕೆಳಗಿನ ಅಧಿಕಾರಿಗಳಿಗೆ ಕೇಂದ್ರ ಸಚಿವರು ಮತ್ತು ಚುನಾಯಿತ ಜನಪ್ರತಿನಿಧಿಗಳಾದ ಹೆಚ್. ಡಿ. ಕುಮಾರಸ್ವಾಮಿಯವರ ವಿರುದ್ಧ ಅವಾಚ್ಯ ಮತ್ತು ಅಸಭ್ಯ ಪದಗಳನ್ನು ಬಳಸಿ ಪತ್ರವನ್ನು ಕಳುಹಿಸಿರುವುದು ಮತ್ತು ಈ ಪತ್ರವನ್ನು ಸಾಮಾಜಿಕ ಜಾಲತಾಣ ಮತ್ತು ಮಾಧ್ಯಮಗಳಿಗೆ ಬಿಡುಗಡೆ ಮಾಡಿರುವುದು ಭಾರತೀಯ ಆಡಳಿತ ಸೇವಾ ನಿಯಮಗಳ ಪ್ರಕಾರ ದುರ್ನಡತೆಯಾಗಿರುತ್ತದೆ, ಹಾಗೂ ಕಾನೂನು ಬಾಹಿರವಾಗಿರುತ್ತದೆ ಎಂದು ಅಧಿಕಾರಿ ಚಂದ್ರಶೇಖರ್ ಮೇಲೆ ಕಿಡಿಕಾರಿದರು.

ಈ ಅಧಿಕಾರಿಯ ವಿರುದ್ಧ ಎಂ. ಚಂದ್ರಶೇಖರ್ ಮತ್ತು ರಾಜ್ಯದ ಪೊಲೀಸ್ ಅಧಿಕಾರಿಗಳ ವಿರುದ್ಧ ದಾಖಲಾಗಿರುವ ಪ್ರಕರಣಗಳ ಬಗ್ಗೆ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದೆ ಭ್ರಷ್ಟತೆಗೆ ಉತ್ತೇಜನ ನೀಡಿರುತ್ತದೆ. ಇವರ ವಿರುದ್ಧ ಸೂಕ್ತ ತನಿಖೆಯನ್ನು ಮಾಡಿ ಕ್ರಮ ಕೈಗೊಳ್ಳಬೇಕೆಂದು ರಾಜ್ಯ ಸರ್ಕಾರ ಅವರನ್ನು ಒತ್ತಾಯಿಸಿದರು.

ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ಅವರ ವ್ಯಕ್ತಿತ್ವಕ್ಕೆ ಧಕ್ಕೆ ತಂದಿರುವ ಹಿನ್ನಲೆಯಲ್ಲಿ ಎಂ. ಚಂದ್ರಶೇಖರ್ ರವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಭಾರತೀಯ ಪೊಲೀಸ್ ಸೇವೆಯಿಂದ ಅಮಾನತ್ತುಗೊಳಿಸಿ ಇವರ ವಿರುದ್ಧ ಉನ್ನತ ಮಟ್ಟದ ತನಿಖೆ ನಡೆಸಲು ಅಗತ್ಯವಿರುವ ದಾಖಲಾತಿಗಳೊಂದಿಗೆ ಭಾರತೀಯ ಪೊಲೀಸ್ ಸೇವೆಗಳ ವೃಂದದ ಪ್ರಾಧಿಕಾರವಾಗಿರುವ ಕೇಂದ್ರ ಗೃಹ ಸಚಿವಾಲಯಕ್ಕೆ ಪ್ರಸ್ತಾವನೆಯನ್ನು ಸೂಕ್ತ ಶಿಫಾರಸ್ಸಿನೊಂದಿಗೆ ಕಳುಹಿಸಬೇಕೆಂದು ಈ ಸಂದರ್ಭದಲ್ಲಿ ಅಗ್ರಹ ಪಡಿಸಿದರು.

ಸಂದರ್ಭದಲ್ಲಿ ಜೆಡಿಎಸ್ ನಗರ ಅಧ್ಯಕ್ಷರಾದ ಹೊನ್ನೂರಪ್ಪ (ವಂಡ್ರಿ,) ಯುವ ಘಟಕದ ಜಿಲ್ಲಾ ಅಧ್ಯಕ್ಷರಾದ ಕಿರಣ್ ಕುಮಾರ್ ಪಕ್ಷದ ಕಾರ್ಯಕರ್ತರಾದ ಬಸವ, ರಾಮು, ಅಶೋಕ ಮಹಿಳಾ ಅಧ್ಯಕ್ಷರಾದ ಜಮೀಲಾ, ಕಚೇರಿ ಕಾರ್ಯದರ್ಶಿ ಬದ್ರಿನಾಥ್, ರೇಷ್ಮಾ, ನಾಗವೇಣಿ, ಶಬನಾ, ಸೇರಿದಂತೆ ಪಕ್ಷದ ಮುಖಂಡರು, ಯುವಕರು ಉಪಸ್ಥಿತರಿದ್ದರು.

VARTHALOKA Kannada Daily Morning News Paper Printed at NIKHIL OFFSET PRINTES Ward No. 23, Buddha Circle, Hosalli Main Road, GANGAVATHI-583227. Dist: Koppal,
Editor & Published by Mohammed jeelan. G., Rajasab Compound, Opp. Kulayappa Building, 1st Cross, Patel Nagar, HOSPET Dist : Vijaynagar, Mob. No.: 9482156289 E-Mail: Varthalokahpt@gmail.com